

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 268 Thursday 14-03-2024 E-mail : maruti.b.hosamani76@gmail.com Page: 4 Price : Rs. 1/-


## ಪಿಎಂ-ಸೂರಜ್ ಪೋರ್ಟಲ್ ಲೋಕಾರ್ಪಣೆ। ಜಿಲ್ಲೆಯಲ್ಲಿ ಭಾಗಿಯಾದ ರಾಜ್ಯಪಾಲರು

# ವಂಚಿತ ವರ್ಗಗಳ ಕಲ್ಯಾಣಕ್ಕಾಗಿ ಕೇಂದ್ರ ಸರಕಾರ ಬದ್ಧ : ಗೆಹ್ಲೋಟ್







**ಬಾಗಲಕೋಟೆ :** ದೇಶದಲ್ಲಿ ವಂಚಿತ ಸಮುದಾಯ, ಹಿಂದುಳಿದ ವರ್ಗ ಹಾಗೂ ಸಫಾಯಿ ಕರ್ಮಚಾರಿಗಳಿಗೆ ಸಾಮಾಜಿಕ ನ್ಯಾಯ ನೀಡುವ ವಾತಾವರಣವನ್ನು ಉತ್ತೇಜಿಸುವ ಮೂಲಕ ಭಾರತ ಸರಕಾರವು ನವರಾಷ್ಟ್ರ ನಿರ್ಮಾಣದ ಕನಸು ಹೊಂದಿದೆ ಎಂದು ರಾಜ್ಯದ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಹೇಳಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಭಾಭವನದಲ್ಲಿ ವಿಡಿಯೋ ವರ್ಚ್ಯೂವಲ್ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿಜಿ ಅವರು ಪಿಎಂ-ಸೂರಜ ನ್ಯಾಷನಲ್ ಪೋರ್ಟಲ್ ಲೋಕಾರ್ಪಣೆ ಕಾರ್ಯಕ್ರದಲ್ಲಿ ಪಾಲ್ಗೊಂಡು ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳಿಗೆ ಸೌಲ ಸೌಲಭ್ಯಗಳ ಮಂಜೂರಾತಿ ಪತ್ರ ಮತ್ತು ಸಫಾಯಿ ಕರ್ಮಚಾರಿಗಳಿಗೆ ಆರೋಗ್ಯ ಕಾರ್ಡ ವಿತರಿಸಿ ಮಾತನಾಡಿದ ಅವರು ದೇಶ ಅಬಿವೃದ್ದಿ ಹೊಂದಲು ಪ್ರತಿಯೊಬ್ಬ ನಾಗರಿಕನ ಕೊಡುಗೆ ಅಪಾರವಾಗಿದೆ. ಉದ್ದಿಮೆಗಳಿಗೆ ಸಾಲದ ನೆರವು ನೀಡಿ ರಾಷ್ಟ್ರ ವ್ಯಾಪಿ ಔಟ್‌ರೀಚ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಇದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪಿಎಂ-ಸೂರಜ್ ವೆಬ್ ಪೋರ್ಟಲ್ ಅನಾವರಣಗೊಳಿಸಿದ್ದಾರೆ ಎಂದರು.

ಕೇಂದ್ರ ಸರಕಾರ ಸಮಾಜದ ವಂಚಿತ ವರ್ಗಗಳ ಕಲ್ಯಾಣ ಮತ್ತು ಉನ್ನತಿಗಾಗಿ ತನ್ನ ಭದ್ದತೆಯನ್ನು ಬಲವಾಗಿ ಅನುಸರಿಸುತ್ತಿದೆ. ದೇಶದ ವಂಚಿತ ಸಮುದಾಯಗಳ ಸಬಲೀಕರಣ ಮತ್ತು ಉತ್ತೇಜನಕ್ಕಾಗಿ ಪ್ರಧಾನಮಂತ್ರಿ ಅವರು ದೇಶದಾದ್ಯಂತ 500ಕ್ಕೂ ಹೆಚ್ಚು ಜಿಲ್ಲೆಗಳೊಂದಿಗೆ ನೇರವಾಗಿ ಸಂಪರ್ಕ ಸಾಧಿಸಿದ್ದಾರೆ. ಮತ್ತು ಸಂವಾದ ನಡೆಸಿ ಸಂಪರ್ಕ ಹೊಂದಿರುವುದು ಸಂತೋಷದ ವಿಷಯವಾಗಿದೆ. ಮಹಿಳೆಯರಿಗಾಗಿ ವಯೋಸ್ತ್ರೀ ಯೋಜನೆ ಜಾರಿಗೆ ತಂದು ನಿರ್ಗತಿಕ ಅಶಕ್ತ, ವಯೋವೃದ್ದ ಮಹಿಳೆಯರ ರಕ್ಷಣೆಗಾಗಿ ಪಣತೊಟ್ಟಿದೆ ಎಂದು ತಿಳಿಸಿದರು.

ಕಳೆದ 10 ವರ್ಷಗಳಲ್ಲಿ 25 ಲಕ್ಷ ಪರಿಶಿಷ್ಟ ಜಾತಿ, ಇತರೆ ಹಿಂದುಳಿದ ವರ್ಗಗಳ ಮತ್ತು ನೈರ್ಮಲ್ಯ ಕಾರ್ಮಿಕರಿಗೆ ಸಚಿವಾಲಯದ ಉನ್ನತ ನಿಗಮಗಳಿಂದ 11437.39 ಕೋಟಿ ರೂ.ಗಳ ಸಾಲದ ನೆರವು ನೀಡಲಾಗಿದೆ. ಈ ಸಾಲದ ನೆರವಿನಿಂದ 25 ಲಕ್ಷ ಜನರು ಮಾತ್ರವಲ್ಲದೇ 25 ಲಕ್ಷ ಕುಟುಂಬಗಳು ಸಹ ಪ್ರಯೋಜನ ಪಡೆದಿವೆ. ಪಿ.ಎಂ ದಕ್ಷ ಯೋಜನೆಯಡಿ ಲಕ್ಷಾಂತರ ಜನರಿಗೆ ಕೌಶಲ್ಯ ತರಬೇತಿ ನೀಡುವ ಕಾರ್ಯ ಮಾಡುತ್ತಿವೆ. ರಾಜ್ಯದಲ್ಲಿ 23 ಜಿಲ್ಲೆಗಳ ಸುಮಾರು 10 ಸಾವಿರ ಫಲಾನುಭವಿಗಳು ಇದರ ಲಾಭ ಪಡೆದಿದ್ದಾರೆ ಎಂದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದ ಜನರು ಉದ್ದಿಮೆ ಪ್ರಾರಂಭಿಸಲು ಸಾಲ ಸೌಲಭ್ಯದ ನೆರವು ನೀಡುವ ಕಾರ್ಯಕ್ರಮ ಇದಾಗಿದೆ. ಸರಕಾರದ ಪ್ರತಿಯೊಂದು ಯೋಜನೆಗಳ ಲಾಭ ಫಲಾನುಭವಿಗಳಿಗೆ ತಲುಪಬೇಕು. ವಿವಿಧ ವಲಯಗಳಲ್ಲಿ ಕೆಲಸ ಮಾಡಲು ಪ್ರತಿಯೊಬ್ಬರಿಗೂ ಸಾಲಸೌಲಭ್ಯ ದೊರೆತಾದ ಮಾತ್ರ ಅನುಕೂಲವಾಗಲಿದೆ. ಕೇಂದ್ರ ಸರಕಾರದ ಪಿಎಂ ವಿಶ್ವಕರ್ಮ, ಸ್ವನಿಧಿ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದು ಇದರಿಂದ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯಾಗಲಿದೆ ಎಂದರು.

ಸಫಾಯಿ ಕರ್ಮಚಾರಿಗಳು ಸೆಪ್ಟಿಕ್ ಟ್ಯಾಂಕರ ಕೆಲಸದಲ್ಲಿ ತೊಡಗಿ ತೊಂದರೆಗೆ ಒಳಗಾಗುತ್ತಿದ್ದಾರೆ ಅವರಿಗೆ ಉತ್ತೇಜನ ನೀಡುವ ಸಲುವಾಗಿ ಆರೋಗ್ಯ ಕಾರ್ಡ ನೀಡಲಾಗುತ್ತಿದೆ.

ಸ್ವಾಭಿಮಾನದ ಬದುಕು ಬದುಕಲು ಆರ್ಥಿಕವಾಗಿ ಸಬಲರಾಗಬೇಕು. ಬ್ಯಾಂಕ್‌ಗಳು ಕರ್ತವ್ಯ ಬದ್ದತೆಯಿಂದ ಕೆಲಸ ಮಾಡಿದಾಗ ಮಾತ್ರ ಎಲ್ಲರೂ ಮುಂದೆ ಬರಲು ಸಾದ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕಿನ ಹುಬ್ಬಳ್ಳಿ ವಿಭಾಗದ ಮಹಾ ಪ್ರಬಂಧಕ ಎಂ.ವಿ-ಜಯಕುಮಾರ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಜಿ.ಪಂ ಸಿಇಓ ಶಶಿಧರ ಕುರೇರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಕೆವಿಜಿ ಬ್ಯಾಂಕ್‌ನ ರಿಜಿನಲ್ ಮ್ಯಾನೇಜರ ಶ್ರೀಧರ, ಲೀಡ್ ಬ್ಯಾಂಕ್ ಮ್ಯಾನೇಜರ ಮಧುಸೂದನ, ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ ಶೈಲಜಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಕ್ಕಳನ್ನು ಶಿಕ್ಷಣದ ಜೊತೆಗೆ ಆಚಾರ, ವಿಚಾರವಂತರನ್ನಾಗಿ ಮಾಡಲು ಗುರುಪಾದ ಮಹಾಸ್ವಾಮಿಗಳು ಕರೆ

**ಬೀಳಗಿ :** ಮನುಷ್ಯನಿಗೆ ದುಡಿದಷ್ಟು ಚೈತನ್ಯ ಬರುತ್ತದೆ. ಶಿಕ್ಷಕರು ಮಕ್ಕಳ ಭವಿಷ್ಯವೇ ನಮ್ಮ ಬದುಕು ಎಂದು ತಿಳಿದುಕೊಂಡು ಸೇವೆ ಸಲ್ಲಿಸಬೇಕು. ಶಿಕ್ಷಣದ ಜೊತೆಗೆ ಆಚಾರ, ವಿಚಾರವಂತರನ್ನಾಗಿ ಮಾಡಬೇಕೆಂದು ಶ್ರೀ ಅಡವಿಸಿದ್ಧೇಶ್ವರ ಪ್ರಾಥಮಿಕ ಶಾಲೆಯ ಗೌರವಾಧ್ಯಕ್ಷರಾದ ಗುರುಪಾದ ಮಹಾಸ್ವಾಮಿಗಳು ಕರೆ ನೀಡಿದರು.

ತಾಲೂಕಿನ ಜಾನಮಟ್ಟಿ ಗ್ರಾಮದಲ್ಲಿ ಶ್ರೀ ಅಡವಿಸಿದ್ಧೇಶ್ವರ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿ, ಸಂಗ್ರಹಿಸಿದ ಸಂಪತ್ತನ್ನು ಅಪಹರಿಸಬಹುದು. ಆದರೆ ಪಡೆದ ಜ್ಞಾನವನ್ನು ಅಪಹರಿಸಲು ಸಾಧ್ಯವಿಲ್ಲ. ಅದು ಶಾಶ್ವತವಾಗಿ ಉಳಿಯುತ್ತದೆ ಎಂದು ಹೇಳಿದರು.

ಯುವಕರಲ್ಲಿ ಹೆಬ್ಬುಲಿ ಕಟಿಂಗ್ ಸೇರಿದಂತೆ ವಿಚಿತ್ರ ಕಟಿಂಗ್ ಮಾಡಿಸುವ ಟ್ರೆಂಡ್ ಚಾಲು ಆಗಿದ್ದು, ಮೋಬೈಲ್ ಗೀಳಿಗೆ ಅಂಟಿಕೊಂಡಿದ್ದು. ಮಕ್ಕಳು ಹಾಳಾಗುವ ಮುನ್ನ ಪಾಲಕರು ಎಚ್ಚೆತ್ತುಕೊಂಡು ಬುದ್ಧಿವಾದ ಹೇಳಿ ಸರಿ ದಾರಿಯಲ್ಲಿ ಮುನ್ನೆಡೆಸಬೇಕೆಂದು ಕಿವಿ ಮಾತು ಹೇಳಿದರು.

ಪ್ರೌಢ ವಿಭಾಗದ ಬಿ.ಆರ್.ಪಿ. ಎಂ. ಬಿ. ಕಣಬೂರ ಉದ್ಘಾಟಿಸಿ ಮಾತನಾಡಿ, ಇಂದಿನ ಮಕ್ಕಳು ದೇಶದ ಭಾವಿ ರೂವಾರಿಗಳಾಗಿದ್ದು,



ಪಾಲಕರು ಮಕ್ಕಳ ಜೊತೆಗೆ ಹೆಚ್ಚು ಸಮಯ ಕಳೆಯಬೇಕು. ಸ್ವಾತಂತ್ರ್ಯ ಪಡೆದ ಬಳಿಕ ಮಠಾಧೀಶರು ಶಿಕ್ಷಣ ಸಂಸ್ಥೆ ತೆರೆದು ವಿದ್ಯೆ, ಅನ್ನ, ವಸತಿ ನೀಡಿದ್ದರಿಂದ ಸಾಕ್ಷರತಾ ಪ್ರಮಾಣ ಹೆಚ್ಚಾಗಲು ಕಾರಣವಾಯಿತು ಎಂದರು.

ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಸ್. ಎಸ್. ಗೋಕಾವಿ ಪಾಲಕರು ಮಕ್ಕಳ ಬಗ್ಗೆ ತುಂಬಾ ಕಾಳಜಿ ವಹಿಸಬೇಕು. ಮೋಬೈಲ್ ಮತ್ತು ಧಾರಾವಾಹಿ ಹುಚ್ಚು ಮಕ್ಕಳನ್ನು ಕೆಡಿಸುತ್ತಿದೆ ಎಂದು ಹೇಲಿದರು. ಮುಖ್ಯೋಪಾಧ್ಯಾಯಿನಿ ಆರ್. ಬಿ. ಬರಗಾಲ ವರದಿ ವಾಚಿಸಿದರು.

ಇದೇ ಸಂದರ್ಭದಲ್ಲಿ 2022-23ನೇ ಸಾಲಿನಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ 8 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು ಜರುಗಿದವು.

ಶ್ರೀ ಅಡವಿಸಿದ್ಧೇಶ್ವರ ಪ್ರಾಥಮಿಕ ಶಾಲೆಯ ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಜೆ. ಆರ್. ವಟವಟಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಪಂ ಅಧ್ಯಕ್ಷ ಮಲ್ಲಪ್ಪ ಭಂಟನೂರ, ಬಿಆರ್‌ಪಿ ಎಚ್. ಟಿ. ಸಣಗೌಡರ, ಸಿಆರ್‌ಪಿಗಳಾದ ಎಂ. ಕೆ. ತೋಟದ, ವಿ. ಎನ್. ಸಾಲಾಪೂರ, ಕಜಾಪ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ, ಶಿಕ್ಷಕ ಎಂ. ಬಿ. ತಾಂಬೋಳಿ, ಶಿಕ್ಷಕ ಎಲ್. ಡಿ. ಹಳ್ಳಿ, ಹೆರಕಲ್ ಗ್ರಾಪಂ ಕಾರ್ಯದರ್ಶಿ ಡಿ. ಎಂ. ಮಾದರ, ಶಂಕರ ಡಬರಿ, ಎನ್. ಎಚ್. ಕಂಬಾರ, ಎ. ಆರ್. ಹಳ್ಳೂರ, ಬಿ. ಎಂ. ಸಂಶಿ ಸೇರಿದಂತೆ ಮತ್ತಿತರಿದ್ದರು.

ಬಿ. ಎಚ್. ಮುರನಾಳ ಸ್ವಾಗತಿಸಿದರು. ಎಸ್. ಜಿ. ಗೌಡರ ವಂದಿಸಿದರು.

## ವಿದ್ವಾನ ಶಿವಾನಂದಗೆ ಪಿ.ಎಚ್.ಡಿ. ಪದವಿ ಪ್ರದಾನ

**ಜಮಖಂಡಿ :** ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಚಿಕ್ಕನಂದಿ ಗ್ರಾಮದ ನಿವಾಸಿ, ಬೆಂಗಳೂರಿನ ಬಸವನಗುಡಿ ಸುರಾನ ಕಾಲೇಜಿನ ಸಂಸ್ಕೃತ ವಿಭಾಗದ ಅಧ್ಯಕ್ಷ ವಿದ್ವಾನ ಶಿವಾನಂದ ಲಕ್ಷ್ಮಣ ಬಣವಿ ಅವರಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ



ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಡಾ.ವಿ.ಗಿರೀಶಚಂದ್ರ ಮಾರ್ಗದರ್ಶನದಲ್ಲಿ ಅವಧೂತರ ಪರಂಪರೆ ಮತ್ತು ಅದ್ವೈತ ದರ್ಶನ ತೌಲನಿಕ ಅಧ್ಯಯನ ಎಂಬ ಸಂಸ್ಕೃತ ವಿಷಯದಲ್ಲಿ (ವಿದ್ಯಾವಾರಿ) ಪ್ರಬಂಧ ಮಂಡಿಸಿದ್ದರು.

# ಹುಬ್ಬಳ್ಳಿ ಸದ್ಗುರು ಸಿದ್ಧಾರೂಢರು ಶಿವನ ಅವತಾರಿಯಾಗಿದ್ದಾರೆ: ಈಶ್ವರ ಬಳಿಗಾರ



**ಬೆಟಗೇರಿ :** ಸದ್ಗುರು ಸಿದ್ಧಾರೂಢರು ಮಾನವನ ಅಜ್ಞಾನ ಕಳೆದು ಸುಜ್ಞಾನದ ಸನ್ಮಾರ್ಗ ತೋರಿಸಿದ ಮಹಾನ್ ದೇವತಾ ಪುರುಷ, ಹುಬ್ಬಳ್ಳಿ ಸದ್ಗುರು ಶ್ರೀ ಸಿದ್ಧಾರೂಢರು ಶಿವನ ಅವತಾರಿಯಾಗಿದ್ದಾರೆ. ಪ್ರತಿಯೊಬ್ಬರೂ ಶಿವನಾಮಸ್ಮರಣೆ ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು ಎಂದು ಬೆಟಗೇರಿ ಗ್ರಾಮದ ಸದ್ಗುರು ಶ್ರೀ ಸಿದ್ಧಾರೂಢರ ಪಾದಯಾತ್ರೆ ವ್ಯವಸ್ಥಾಪಕ ಸಮಿತಿ ಮುಖ್ಯಸಂಚಾಲಕ ಈಶ್ವರ ಬಳಿಗಾರ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಸದ್ಗುರು ಶ್ರೀ ಸಿದ್ಧಾರೂಢರ ಸದ್ಭಭಕ್ತರು ಮಾ.5ರಂದು ಹುಬ್ಬಳ್ಳಿ ಸಿದ್ಧಾರೂಢ ಮಠಕ್ಕೆ ಹಮ್ಮಿಕೊಂಡ ಪಾದಯಾತ್ರೆಗೆ ಸ್ಥಳೀಯ ಡಾ.ಬೆಟಗೇರಿ ಕೃಷ್ಣಶರ್ಮ ವೃತ್ತದಲ್ಲಿ ಚಾಲನೆ ನೀಡುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೆಟಗೇರಿ ಗ್ರಾಮದ ಪ್ರವಚನಕಾರ ದಿ.ಪುಂಡಲೀಕಪ್ಪ (ಮಹಾರಾಜರು) ಪಾರ್ವತೇರ ಅವರ ಮಾರ್ಗದರ್ಶನದಂತೆ ಮಹಾಶಿವರಾತ್ರಿ ಪ್ರಯುಕ್ತ ಸ್ಥಳೀಯ ಯುವಕರು, ಸದ್ಭಭಕ್ತರು ಸತತ 9ನೇ ವರ್ಷಗಳಿಂದ ಪ್ರತಿ ವರ್ಷದ ಮಹಾಶಿವರಾತ್ರಿ ಜಾತ್ರೆಯ ಪ್ರಯುಕ್ತ ಹುಬ್ಬಳ್ಳಿ ಸಿದ್ಧಾರೂಢರ ಮಠಕ್ಕೆ ಪಾದಯಾತ್ರೆ ಹಮ್ಮಿಕೊಳ್ಳುತ್ತಾ ಬಂದಿದ್ದಾರೆ ಎಂದರು.

ಸ್ಥಳೀಯ ಸದ್ಗುರು ಶ್ರೀ ಸಿದ್ಧಾರೂಢರ ಪಾದಯಾತ್ರೆ ವ್ಯವಸ್ಥಾಪಕ ಸಮಿತಿ ಸಂಚಾಲಕ ಮಲ್ಲಪ್ಪ ಪಣದಿ ಪ್ರಾಸ್ತಾವಿಕವಾಗಿ ಮಾತನಾಡಿ, ನೂರಾರು ಜನ ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದು, ಬೆಟಗೇರಿ ಗ್ರಾಮದಿಂದ ಅಕ್ಕಿಸಾಗರ ಮಾರ್ಗವಾಗಿ ಯರಗಟ್ಟಿ, ಸವದತ್ತಿ, ಚಂದನಮಟ್ಟಿ ಗ್ರಾಮಗಳಲ್ಲಿ ವಾಸ್ತವ್ಯ ಮಾಡಿ, ಮಾ.8ರಂದು ಹುಬ್ಬಳ್ಳಿ ಸಿದ್ಧಾರೂಢರ ಮಠಕ್ಕೆ ಪಾದಯಾತ್ರೆ ತಲುಪಲಿದೆ. ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವವರಿಗೆ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ ಎಂದರು.

ತಾಪಂ ಮಾಜಿ ಸದಸ್ಯ ಬಸವಂತ ಕೋಣಿ ಪಾದಯಾತ್ರೆಗೆ ಚಾಲನೆ ನೀಡಿದರು. ಸ್ಥಳೀಯ ಶ್ರೀ ಸಾಯಿ ಮೆಡಿಕಲ್ ಮತ್ತು ಜನರಲ್ ಸ್ಟೂರ್ಸ್ ಮಾಲೀಕರಾದ ಅಶೋಕ ದೇಯಣ್ಣವರ ಪ್ರಾಯೋಜಕತ್ವದಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿರುವವರಿಗೆ ಟೀಶರ್ಟ್‌ಗಳನ್ನು ನೀಡಿ, ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವವರಿಗೆ ಶುಭ ಹಾರೈಸಿದರು.

ಇಲ್ಲಿಯ ಮುಖಂಡರಾದ ಭೀಮಶೆಪ್ಪ ದೇಯಣ್ಣವರ, ಬಸವರಾಜ ಪಣದಿ, ಅರ್ಜುನ ಅಂದಾನಿ, ಮಹಾದೇವ ದಂಡಿನ, ಸುರೇಶ ಸಿದ್ನಾಳ, ಶಿವಲಿಂಗ ಮುಧೋಳ, ಬಾಳಪ್ಪ ಕನೋಜಿ, ಸಿದ್ದಪ್ಪ ಹೊರಟ್ಟಿ, ಲಕ್ಷ್ಮಣ ಸೋಮಗೌಡ್ರ, ಮಹಾದೇವ ಮಾಳೇದ, ದುಂಡಪ್ಪ ಕಂಬಿ, ಬಸಪ್ಪ ಬಳಿಗಾರ, ದುಂಡಪ್ಪ ಮಾಳೇದ, ಹನುಮಂತ ನೆರಿತಲಿ, ಪತ್ರೆಪ್ಪ ಮೇಳೆಣ್ಣವರ, ಪ್ರಕಾಶ ಹಾಲಣ್ಣವರ, ಮಲ್ಲಿಕಾರ್ಜುನ ಕಂಬಿ, ಬಸಪ್ಪ ತೋಟಗಿ, ಸುರೇಶ ನೀಲಣ್ಣವರ, ಸ್ಥಳೀಯ ಸದ್ಗುರು ಸಿದ್ಧಾರೂಢರ ಪಾದಯಾತ್ರೆ ವ್ಯವಸ್ಥಾಪಕ ಸಮಿತಿ ಸದಸ್ಯರು, ಯುವಕರು, ಸದ್ಗುರು ಸಿದ್ಧಾರೂಢರ ಭಕ್ತರು ಇದ್ದರು.

# ಸಭೆಯಲ್ಲಿ ಚವಳಿಕಾಯಿ, ಬಂದನೆಕಾಯಿ ಲೆಕ್ಕ ಬೇಡ: ಜಗದೀಶ

**ಜಮಖಂಡಿ :** ಚವಳಿಕಾಯಿ, ಬದನೆಕಾಯಿ ತರಕಾರಿ ಖರೀದಿಸಿದ ವರದಿಯನ್ನು ಸಭೆಗೆ ಮಂಡಿಸುತ್ತಿದ್ದಿರಾ, ಇದು ತರಕಾರಿ ಮಾರ್ಕೆಟ ಅಲ್ಲ ಎಂದು ಶಾಸಕ ಜಗದೀಶ ಗುಡಗುಂಟಿ ಅವರು ಸಿಡಿಪಿಓ ಅಧಿಕರಿಯನ್ನು ತರಾಟೆಗೆ ತೆಗೆದುಕೊಂಡರು.

ನಗರದ ತಾಲೂಕ ಪಂಚಾಯತ ಸಭಾಭವದಲ್ಲಿ ನಡೆದ ತ್ರೈಮಾಸಿಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ, ನೀವು ತಾಲೂಕಮಟ್ಟದ ಅಧಿಕಾರಿಯಾಗಿದ್ದು, ತಮ್ಮ ಇಲಾಖೆ ವರದಿಯನ್ನು ಸರಿಯಾಗಿ ಸಲ್ಲಿಸಲು ಬರುವುದಿಲ್ಲವೇ ನಿಮಗೆ ಎಷ್ಟು ಸಲ ಹೇಳಬೇಕು. ನಿಮಗೆ ಸಾಮಾನ್ಯ ಜ್ಞಾನವಿಲ್ಲದೆ ಹೇಗೆ ಕೆಲಸ ಮಾಡುತ್ತಿರಿ ಅಂಕಿ-ಅಂಶಗಳನ್ನು ಸರಿಯಾಗಿ ನಮೂದೆ ಮಾಡದೆ ಸಭೆಗೆ ಆಗಮಿಸುತ್ತಿದ್ದಾರೆ ನಿಮಗೆ ಮುಜಗುರ ಆಗುವದಿಲ್ಲವೇ ಎಂದು ಖಾರವಾಗಿ ಪ್ರಶ್ನಿಸಿದರು.

ತಾಲೂಕಾ ವೈದ್ಯಾಧಿಕಾರಿ ಗೌಬುಸಾಬ ಗಲಗಲಿ ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಕಳೆದ ಎಪ್ರೀಲ್‌ನಿಂದ ಜನೇವರಿವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವಳಿ ತಾಲೂಕಿನ ಶಾಲಾಮಕ್ಕಳ ಆರೋಗ್ಯ ತಪಾಸಣೆ ವೇಳೆಯಲ್ಲಿ 12 ಮಕ್ಕಳಿಗೆ ಹೃದಯ ಖಾಯಿಲೆ, 8 ಜನ ಎಚ್‌ಐವಿ ಸೋಂಕಿತರಿದ್ದು, 1 ಚಿಕನಗುನ್ಯಾ ಕಂಡು ಬಂದಿದ್ದು ಇಲಾಖೆ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದರು. ಮುಖ್ಯ ವೈದ್ಯಾಧಿಕಾರಿ ವೈದ್ಯಾಧಿಕಾರಿ ಡಾ.ಕೃಷ್ಣಾ ಬಣ್ಣದ ಮಾತನಾಡಿ, 100 ಹಾಸಿಗೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಿಬ್ಬಂದಿ, ಗ್ರೂಪ-ಡಿ, ಫಾರ್ಮಾಸಿಗಳ ಹುದ್ದೆಗೆ



ಸಿಬ್ಬಂದಿಗಳ ಕೊರತೆಯಿದ್ದು ಈಗಾಗಲೆ ಸರಕಾದ ಗಮನ ತರಲಾಗಿದೆ. ಲಭ್ಯವಿರುವ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಔಷಧಿಗಳ ಕೊರತೆಯಿದ್ದು ಪೂರೈಕೆಯಲ್ಲಿ ಕೊರತೆ ಎದುರಾಗುತ್ತಿದೆ. ಹೆರಿಗೆಗೆ ಬಂದಾಗ ನೋವು ಕಾಣಿಸಿರುವುದಿಲ್ಲ ಅವರಿಗೆ 12 ಗಂಟೆಗಳ ಕಾಲ ನೀರಿಕ್ಷಣಾ ಕೊಠಡಿಯಲ್ಲಿಟ್ಟು ನಂತರ ಹೆರಿಗೆ ಮಾಡಿಸುತ್ತಿದ್ದೇವೆ. ನೋವು ತಡೆಯದೆ ಅವಸರಕ್ಕಾಗಿ ಅನಿವಾರ್ಯವಾಗಿ ಶಸ್ತ್ರ ಚಿಕಿತ್ಸೆ ಮೂಲಕ ಹೆರಿಗೆ ಮಾಡಬೇಕಾಗುತ್ತದೆ ಎಂದರು.


ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಎಚ್‌ಐವಿ ಪೀಡಿತ ವಿದ್ಯಾರ್ಥಿಗಳಿಗೆ ಉತ್ತಮ ಚಿಕಿತ್ಸೆ ಸಹಿತ ಅವರಿಗೆ ಪೌಷ್ಠಿಕಾಂಶ ಆಹಾರ ಕಲ್ಪಿಸಬೇಕು. ಅವರ ಮುಂದಿನ ಸ್ವಾವಲಂಬಿ ಜೀವನಕ್ಕೆ ಬೇಕಾಗುವ ಅನೂಕುಲಗಳನ್ನು ಮಾಡಬೇಕು. ಜೊತೆಗೆ ಯುವತಿಯರಿಗೆ ಭದ್ರತೆ ಕಲ್ಪಿಸುವ ವ್ಯವಸ್ಥೆಯಾಗಬೇಕು. ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಕ್ರಮವಹಿಸಬೇಕು. ರಾತ್ರಿ ವೇಳೆ ವೈದ್ಯರು ಸರಿಯಾಗಿ ಕೆಲಸ ನಿರ್ವಹಿಸಬೇಕು. ತುರ್ತು ರೋಗಿಗಳು ಬಂದಾಗ ಚಿಕಿತ್ಸೆ ನೀಡಲು ವಿಳಂಬ ಮಾಡಬಾರದು. ಕೆಲವು ರೋಗಿಗಳು ಮಧ್ಯ ರಾತ್ರಿಯಲ್ಲಿ ಕರೆ ಮಾಡುತ್ತಾರೆ. ನಿಮ್ಮ ಕೆಲಸ ನೀವು ಸರಿಯಾಗಿ ನಿರ್ವಹಿಸಲು ಸೂಚಿಸಿದರು.

ಪೌರಾಯುಕ್ತೆ ಲಕ್ಷೀ ಅಸ್ಟಗಿ ಮಾತನಾಡಿ, ನಗರದಲ್ಲಿ ಬಿದಿನಾಯಿಗಳ, ಜಾನುವಾರುಗಳ ಹಾವಳಿ ಹೆಚ್ಚಾಗಿದ್ದು, ನಿಯಂತ್ರಣಕ್ಕಾಗಿ ಈಗಾಗಲೆ 5 ಲಕ್ಷ ರೂ ಟೆಂಡರ್ ಕರೆಯಲಾಗಿದೆ. ಗಂಡು ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಲಾಗುವುದು. ಬೀದಿ ದನಗಳನ್ನು ಗೋಶಾಲೆಗೆ ಕಳುಹಿಸಿಕೊಡುವ ಪ್ರಯತ್ನ ನಡೆದಿದೆ ಎಂದರು.

ಶಿಕ್ಷಣ ಇಲಾಖೆ, ಸಮಾಜಕಲ್ಯಾಣ ಇಲಾಖೆ, ಪ್ರಾದೇಶಿಕ ಅರಣ್ಯ, ಸಾಮಾಜಿಕ ಅರಣ್ಯ, ಪಂಚಾಯತ ರಾಜ್ ಇಲಾಖೆ, ಪಶು ಸಂಗೋಪನೆ, ಸಣ್ಣ ನೀರಾವರಿ, ಭೂಸ್ವಾದೀನ, ಜಿಎಲ್‌ಬಿಸಿ ಇಲಾಖೆ ಸಹಿತ ವಿವಿಧ ಇಲಾಖೆಗಳ ಅಧಿಕಾರಿಗಳು ವರದಿ ಮಂಡಿದರು.

ವೇದಿಕೆಯಲ್ಲಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಭಾರತಿ ಚಲುವಯ್ಯ, ನೂಡಲ್ ಅಧಿಕಾರಿ ಜಿ.ಎಸ್.ದಾಸರ ಸಹಿತ ಹಲವರು ಇದ್ದರು.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ




**ಬೀಳಗಿ :** ತಾಲೂಕಿನ ಅರಕೇರಿ ಗ್ರಾಮದ ಶ್ರೀಮತಿ ಎಂ. ಎಂ. ಸಾವಕಾರ ಸರಕಾರಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಜರುಗಿತು.

ಶಾಲಾ ಸುಧಾರಣಾ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಬಸವರಾಜ ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ನೌಕರಿಗಾಗಿ ಶಿಕ್ಷಣ ಪಡೆಯದೇ ಬದುಕು ರೂಪಿಸಿಕೊಳ್ಳಲು ಪಡೆಯಬೇಕು. ಇಂದಿನ ಹುಡುಗರು ತಂದೆ-ತಾಯಿ ಮತ್ತು ಗುರು, ಹಿರಿಯರ ಮಾತು ಕೇಳುವುದರ ಜೊತೆಗೆ ಗೌರವಿಸಬೇಕೆಂದು ಹೇಳಿದರು.

ಮುಖ್ಯೋಪಾಧ್ಯಾಯಿನಿ ಎಸ್. ಬಿ. ನಿರಂಜಿ, ಮುಖ್ಯೋಪಾಧ್ಯಾಯ ಬಿ. ಎಸ್. ಭೂಷಣ್ಣವರ, ಶಿಕ್ಷಕ ಸಿದ್ದರಾಮ ಹೊರ್ತಿ ಮಾತನಾಡಿ, ವಿದ್ಯಾರ್ಥಿಗಳು ಆತ್ಮವಿಶ್ವಾಸ ಹೊಂದಿರಬೇಕು. ಪರೀಕ್ಷೆಯನ್ನು ಎದೆಗಂದದೆ ಧೈರ್ಯವಾಗಿ ಉತ್ತರ ಬರೆಯಬೇಕು ಎಂದು ಹೇಳಿದರು.

**ಪ್ರಶಸ್ತಿ:** ಆಶಾ ರಮೇಶ ಬರಗಿ ಸರ್ವೋತ್ತಮ ವಿದ್ಯಾರ್ಥಿನಿ ಪ್ರಶಸ್ತಿ, ರಕ್ಷಿತಾ ಯಂಕಪ್ಪ ಕುಂಬಾರ ಆದರ್ಶ ವಿದ್ಯಾರ್ಥಿನಿ ಪ್ರಶಸ್ತಿ, ದರ್ಶನ ರೇ. ಹಾವಳಿ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಗೋವಿಂದಪ್ಪ ಬೆನಕಟ್ಟಿ, ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಗ್ರಾಪಂ ಉಪಾಧ್ಯಕ್ಷ ಶಂಕರ ಲಮಾಣಿ, ಎಸ್‌ಡಿಎಂಸಿ ಉಪಾಧ್ಯಕ್ಷ ಲಕ್ಷ್ಮಣಗೌಡ ಪಾಟೀಲ, ಸದಸ್ಯರಾದ ಮಲ್ಲಯ್ಯ ಹಿರೇಮಠ, ಸಣ್ಣಪ್ಪ ಆಲಗುಂಡಿ, ಮಾರುತಿ ಕಂಬಳಿ, ಮುಖಂಡರಾದ ವಿ. ಡಿ. ಬೆನಕಟ್ಟಿ, ಬಿ. ಎ. ಪಾಟೀಲ, ಕಲ್ಲಪ್ಪ ಆಲಗುಂಡಿ, ಹನಮಂತ ತೆಗ್ಗೆನ್ನವರ, ಮಲ್ಲು ದುಲಾರಿ, ಪರಶು ಮಲ್ಲಾರ, ತಿಮ್ಮಣ್ಣ ಬೆನಕಟ್ಟಿ, ಅಬ್ದುಲ್ ಜೀರಗಾಳ, ಲಕ್ಷ್ಮಣ ಕೋಲಕಾರ, ಗುರುಪಾದ ಹಳ್ಳೂರ, ಈರಪ್ಪ ನಾವಲಗಿ, ಕೆಜಿಎಸ್ ಮುಖ್ಯೋಪಾಧ್ಯಾಯ ಮನಗೂಳಿ, ಹನಮಂತ ಬಿಸನಾಳ, ರತ್ನಾ ಮಾದಾಪುರ, ಎಸ್. ಎಸ್. ಪೂಜಾರಿ, ಜೆ. ವೈ. ಗೌಡರ, ಪ್ರೇಮಾ ಬಾಚಕ, ಸೀಮಾ ಆನಿ, ತಿಪ್ಪಣ್ಣ ಬೂದಿಹಾಳ, ಸಂತೋಷ ಪವಾರ ಮತ್ತಿತರಿದ್ದರು.

# ಚಿಕಣಿಕಲೆಯ ಶ್ರೀಮಂತಿಕೆ ಮೆರೆಯುತ್ತಿರುವ ಶ್ರೀಮತಿ ಆಶಾರಾಣಿ ನಡೋಣಿ



ಚಿತ್ರಕಲೆಗೆ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನವಿದೆ. ವೈವಿಧ್ಯಮಯ ಸಂಸ್ಕೃತಿ, ನಾಗರಿಕತೆ ಮತ್ತು ಪರಂಪರೆ ಹೊಂದಿದ ನೆಲೆಬೀಡು. ಭಾರತ ದೇಶದ ಈ ಪರಂಪರೆ ಆದಿಮಾನವನಿಂದ ಆರಂಭಗೊಂಡು ಇಂದಿನ ಆಧುನಿಕ ಮನುಷ್ಯನ ತನಕ ಹಾಸಿಕೊಂಡಿದೆ. ಉನ್ನತ ಕಲಾವಂತಿಕೆ ಭಾರತೀಯ ಕಲೆಯ ಮೂಲಗುಣ. ವಿಭಿನ್ನ ಧರ್ಮ, ನಡವಳಿಕೆ, ಆಚರಣೆ, ನಂಬಿಕೆ, ನಮ್ಮ ಕಲೆಯನ್ನು ಅತ್ಯಂತ ಶ್ರೀಮಂತಗೊಳಿಸಿವೆ.

ಕಲೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಈ ನೆಲದ ಮಹಿಳೆಯರು ಸಹ ಪುರುಷರಿಗೆ ಸಮಾನವಾಗಿ ಗುರುತಿಸಿಕೊಂಡಿದ್ದಾರೆ. ಪ್ರತಿಯೊಬ್ಬ ಮಹಿಳೆ ಕ್ರಿಯಾಶೀಲಳಾಗಲು ಈ ಆಧುನಿಕ ಯುಗ ಸೂಕ್ತವಾಗಿದೆ. ಇಂತಹ ಸುಸಂದರ್ಭದಲ್ಲಿ ಮಹಿಳೆ ಕೂಡ ಪ್ರಗತಿಯ ಪಥದಲ್ಲಿ ಕಲಾ ಕ್ಷೇತ್ರದಲ್ಲಿ ದಾಪುಗಾಲು ಹಾಕಿರುವುದಕ್ಕೆ ಬೆಳಗಾವಿ ಜಿಲ್ಲೆ ರಾಯಬಾಗದ ರಾಜ್ಯ-ರಾಷ್ಟ್ರ ಪ್ರಶಸ್ತಿ ಪಡೆದ ಹಿರಿಯ ಚಿತ್ರ ಕಲಾವಿದೆ ಶ್ರೀಮತಿ ಆಶಾರಾಣಿ ಬಾಬುರಾವ ನಡೋಣಿಯವರು ಸಾಕ್ಷಿಯಾಗಿದ್ದಾರೆ.

ಕಲೆಗೆ ಪ್ರಯೋಗವಾಗಿ ಮಾನವೀಯ ಮೌಲ್ಯಗಳಿಂದ ಒಂದುಗೂಡಿಸುವ ಅಂಶಗಳನ್ನು ತಮ್ಮ ಸೈದ್ಧಾಂತಿಕ ವಸ್ತುವನ್ನಾಗಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಖ್ಯಾತಿ ಪಡೆದ ಕ್ರಿಯಾಶೀಲತೆ ಮೈಗೂಡಿಸಿಕೊಂಡ ಚಿಂತನಶೀಲರಾದ ನಾಡಿನ ಪ್ರತಿಭಾವಂತ ಕಲಾವಿದೆ ಶ್ರೀಮತಿ ಆಶಾರಾಣಿ ಯವರು.

ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಅಚ್ಚುಕಟ್ಟಾಗಿಮಾಡುವಇವರಕಾರ್ಯವೈಖರಿ ನಿಜಕ್ಕೂ ಪಾದರಸದಂತೆ. ಇವರ ಹುಟ್ಟೂರು ಹಾಸನ ಜಿಲ್ಲೆಯ ಹಳೇಬೀಡು. ಇವರ ತಂದೆ ದಿವಂಗತ ಬಸವರಾಜು ವೈ. ಎಸ್. ತಾಯಿ ಶೋಭಾ ರಾಣಿ,ಅಕ್ಕ ಜ್ಯೋತಿರಾಣಿ, ತಮ್ಮ ಶಾಂತರಾಜು ಇವರೆಲ್ಲರ ಅಪಾರ ಪ್ರೋತ್ಸಾಹ ಸಹಕಾರದಿಂದ ಬಾಲ್ಯದಿಂದಲೇ ಕಲೆಯ ಗೀಳು ಹಚ್ಚಿಕೊಂಡು ಇದರಲ್ಲಿಯೇ ವಿಪರೀತ ಆಸಕ್ತಿ ಹೊಂದಿದ ಇವರು ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ದೈವವು ಇವರಿಗೆ ಕಲಾವಿದ ಪತಿ ನೀಡುವ ಮೂಲಕ ಕಲೆಯಲ್ಲಿ ಸಾಧನೆ ಮಾಡಲು ಸಹಕಾರಿಯಾಗಿದೆ. ಆಶಾ ರಾಣಿಯವರ ಪತಿ ಡಾ. ಬಾಬುರಾವ ನಡೋಣಿ ಅವರು ರಾಷ್ಟ್ರೀಯ ಪ್ರಶಸ್ತಿ ವಿಜೇತ ಖ್ಯಾತ ಅಂತರಾಷ್ಟ್ರೀಯ ಕಲಾವಿದರಾಗಿ ಈಗಾಗಲೇ ಒಳ್ಳೆಯ ಹೆಸರು ಸಂಪಾದಿಸಿದ್ದು ಗಮನಾರ್ಹ.

ಚಿತ್ರಕಲಾ ಕ್ಷೇತ್ರದಲ್ಲಿ ಆಶಾರಾಣಿ ನಡೋಣಿಯವರು ತಮ್ಮನ್ನು ತಾವು ಸಂಪೂರ್ಣವಾಗಿಅರ್ಪಿಸಿಕೊಂಡುಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಚಿಕಣಿ ಚಿತ್ರ ಹಾಗೂ ಸೃಜನಾತ್ಮಕ ಕಲೆ ಎರಡರಲ್ಲೂ ಸಮನ್ವಯ ಸಾಧಿಸಿರುವ ಇವರ ಕಲಾಕೃತಿಗಳಲ್ಲಿ ರೇಖೆ, ಬಣ್ಣ, ಸೂಕ್ಷ್ಮತೆಯನ್ನು ಹಾಗೂ ನೈಜತೆಯನ್ನು ಗುರುತಿಸಬಹುದು. ಶೈಲಿ ಮತ್ತು ತಂತ್ರ ಎಂಬುದನ್ನು ನೋಡುವಾಗ ಕಲಾವಿದೆ ಆಶಾರಾಣಿಯವರು ಬಳಸಿದ ವಸ್ತುಗಳು ಅವುಗಳನ್ನು ಉಪಯೋಗಿಸಿದ ರೀತಿ ಕಲಾ ಕೃತಿಯಲ್ಲಿ ಮೂಡಿದ ವಿಶೇಷವಾದ ಟೆಕ್ಸ್ಚರ್ ಇವರ ಕಲಾಕೃತಿಗಳಲ್ಲಿ ಗುರುತಿಸಬಹುದು.

ಆಧುನಿಕ ಚಿತ್ರಕಲೆ ಯುಗದಲ್ಲೂ ಸಾಂಪ್ರದಾಯಿಕ ಶೈಲಿಯಾದ ಚಿಕಣಿ ಚಿತ್ರಗಳನ್ನು ಸೃಜನಾತ್ಮಕ ಚಿತ್ರಗಳಲ್ಲಿ ಸಮನ್ವಯಗೊಳಿಸಿ ಚಿತ್ರಗಳನ್ನು ರಚಿಸುವ ಮೂಲಕ ತಮ್ಮನ್ನು ಈ ಕಲಾಕ್ಷೇತ್ರದಲ್ಲಿ ಗುರುತಿಸಿಕೊಂಡು ಕ್ರಿಯಾತ್ಮಕ ಮನೋಭಾವದ ಅಪ್ರತಿಮ ಪ್ರತಿಭೆ ಎಂದೇ ಹೇಳಬಹುದು. ಇವರು ಚಿತ್ರಕಲಾ ಕೃತಿಗಳಲ್ಲಿ ಅನೇಕ ರೀತಿಯ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾರೆ ಆಶಾರಾಣಿಯವರು ರಚಿಸುವ ಕಲಾ ಕೃತಿಗಳು ವಿಭಿನ್ನ ಸಂಯೋಜನೆ ಹಾಗೂ ವಿಭಿನ್ನ ಆಶಯಗಳನ್ನು ಹೊತ್ತ ಕೃತಿಗಳು ಹೆಚ್ಚಾಗಿ ಒಂಟಿ ಹೆಣ್ಣಿನ ಮನದಲ್ಲಿರುವ ಜಟಿಲತೆಯನ್ನು ರಿಫ್ಲೆಕ್ಷನ್ ಆಫ್ ಮೂಡ್ಸ್ , ಫ್ರೆಂಡ್ಸ್ , ಫೀಲಿಂಗ್ಸ್ , ಕಲಾಕೃತಿಗಳಲ್ಲಿ ತಮ್ಮ ವಿಶೇಷವಾದ ತಂತ್ರಗಾರಿಕೆಯಿಂದ ಬಹಳ ಸೊಗಸಾಗಿ ನವಿರಾಗಿ ಚಿತ್ರಿಸಿದ ಕಲಾ ಕೃತಿ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಹಿರಿಯ ಚಿತ್ರ ಕಲಾವಿದೆಯಾಗಿ ಗುರುತಿಸಿಕೊಂಡ ಆಶಾರಾಣಿ ನಡೋಣಿಯವರು ತಮ್ಮ ಇಡೀ ಬದುಕನ್ನ ಕಲೆಗಾಗಿ ಮುಡುಪಾಗಿಟ್ಟಿದ್ದಾರೆ. ವೃತ್ತಿಯಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಮನಮೆಚ್ಚುವ ಜನಮೆಚ್ಚಿದ ಶಿಕ್ಷಕಿಯಾಗಿ ಶಾಲೆಗೆ ಮಾತ್ರ ಸೀಮಿತವಾಗದೆ ಸದಾ ಚಿತ್ರ ರಚನೆಯಲ್ಲಿ ಹೊಸತನ ಹುಡುಕುವ ಪ್ರಯತ್ನದಲ್ಲಿ ಕ್ರಿಯಾಶೀಲರಾಗಿದ್ದಾರೆ. ಅಂತರಂಗದ ಭಾವಗಳಿಗೆ ಶಬ್ದ ರೂಪ, ದುನಿಯಾ ರೂಪ ನೀಡಲಾಗದಿದ್ದಾಗ ಅವುಗಳಿಗೆ ಕ್ಯಾನ್ವಾಸನ್ನೇ ರಂಗಸ್ಥಳ ಮಾಡಿ ಚಿತ್ತಾರ ಸ್ಪಶ ನೀಡಿದಾಗ ಕರ್ತೃ ಹಾಗೂ ನೋಡುಗರಿಬ್ಬರಿಗೂ ಅಭಿವ್ಯಕ್ತ ಆನಂದ ಲಭಿಸುತ್ತದೆ ಎಂಬ ಗಾಢ ನಂಬಿಕೆ ಆಶಾರಾಣಿಯವರದ್ದು.

ಕಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ರಾಜ್ಯ ರಾಷ್ಟ್ರಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುತ್ತಾರೆ. ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ , ರಾಷ್ಟ್ರೀಯ ಟಿಳಕ್ ಸ್ಮಾರಕದ ವಿ. ವಿ. ಓಕ್ ರಾಷ್ಟ್ರ ಪ್ರಶಸ್ತಿ , ರಾಷ್ಟ್ರೀಯ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ , ನಾಗಪುರ ಸೌಥ್ ಸೆಂಟ್ರಲ್ ಝೋನ್ ಕಲ್ಚರಲ್ ರಾಷ್ಟ್ರೀಯ ಮೆರಿಟ್ ಪ್ರಶಸ್ತಿ , ದಸರಾ ಪ್ರಶಸ್ತಿ , ಸ. ಜ. ನಾಗಲೋಟಿಮಠ ಜಿಲ್ಲಾ ಪ್ರಶಸ್ತಿ , ರಾಜ್ಯ ಆದರ್ಶ ಶಿಕ್ಷಕ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳು ಇವರ ಮುಡಿಗೇರಿವೆ. ಅನೇಕ ಸಂಘ, ಸಂಸ್ಥೆಗಳು ಅವರನ್ನು ಪುರಸ್ಕರಿಸಿವೆ. ಇತ್ತೀಚೆಗೆ ನಡೆದ ಸೀಮ್ಲಾ ಹಾಗೂ ನೇಪಾಳದಲ್ಲಿ ಕೂಡ ಅಂತರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಇವರ ಕಲಾಕೃತಿಗಳು ಪ್ರಮುಖ ಕಲಾ ಗ್ಯಾಲರಿ, ಸರ್ಕಾರಿ ಇಲಾಖೆಗಳಲ್ಲಿ ದೇಶ ವಿದೇಶಗಳಲ್ಲಿ ಹಾಗೂ ಖಾಸಗಿ ಸಂಗ್ರಹಾಲಯದಲ್ಲಿವೆ.

ದಣಿವಿಲ್ಲದೆ ಕಲಾಕೃತಿಯಲ್ಲಿದುಡಿಯುತ್ತಿರುವ ಈ ಪ್ರತಿಭಾವಂತ ಕಲಾವಿದೆ ಸಾಧನೆಯ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿರುವ ಇವರು ನಿಜಕ್ಕೂ ಅದ್ವಿತೀಯ ಮಹಿಳೆ ಎಂಬುದರಲ್ಲಿ ಎರಡು ಮಾತಿಲ್ಲ.

● ಲೇಖನ : ಡಾ. ಜಯವೀರ ಎ. ಕೆ.

# ಗುಡ್ಡಾಪೂರ ದಾನಮ್ಮ ದೇವಿಯ ಪುರಾಣ ಮಂಗಲ



**ಬೈಲಹೊಂಗಲ:** ಸಾಂಸ್ಕೃತಿಕ ಕಾರ್ಯಕ್ರಮಗಳ ಬದಲಾಗಿ ಗುಡ್ಡಾಪೂರ ದಾನಮ್ಮ ದೇವಿಯ ಪುರಾಣ ಹಮ್ಮಿಕೊಳ್ಳುವುದರ ಮೂಲಕ ಬೈಲಹೊಂಗಲ ನಾಡಿನ ಭಕ್ತರನ್ನು ತನ್ನ ಕಡೆಗೆ ಸೆಳೆದ ಖ್ಯಾತಿ ಮೂರುಸಾವಿರ ಮಠಕ್ಕೆ ಸಲ್ಲುತ್ತದೆ ಎಂದು ಪ್ರಭು ನೀಲಕಂಠ ಸ್ವಾಮೀಜಿ ಹೇಳಿದರು.

ಪಟ್ಟಣದ ಮೂರುಸಾವಿರ ಮಠದ ಜಾತ್ರಾ ಮಹೋತ್ಸವದ ಪ್ರಯುಕ್ತ ಆಯೋಜಿಸಲಾದ ದಾನಮ್ಮ ದೇವಿ ಪುರಾಣ ಮಂಗಲ,ಗಣ್ಯರ ಸನ್ಮಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಜನ ಸೇರುತ್ತಾರೆ ಎಂಬ ಮಾತನ್ನು ಶ್ರೀಮಠ ಸುಳ್ಳಾಗಿಸಿದೆ.

ಶ್ರೀಮಠದ ಜಾತ್ರಾ ಮಹೋತ್ಸವದ ಪ್ರಯುಕ್ತ 11 ದಿನಗಳ ಕಾಲ ನೆರವೇರಿದ ದಾನಮ್ಮ ದೇವಿ ಪುರಾಣ ಕಾರ್ಯಕ್ರಮ ಹಾಗೂ ಧರ್ಮ ಜಾಗೃತಿ ಪಾದಯಾತ್ರೆಯಲ್ಲಿ ಶ್ರದ್ಧಾ ಭಕ್ತಿಯಿಂದ ಭಾಗಿಯಾದ ಭಕ್ತರೇ ಇದಕ್ಕೆ ಸಾಕ್ಷಿ ಎಂದರು . ಲಿಂ.ಗಂಗಾಧರ ಮಹಾಸ್ವಾಮಿಗಳು 1977 ರಲ್ಲಿ ಅದ್ಭುತ ರಥವನ್ನು ನಿರ್ಮಾಣ ಮಾಡುವುದರ ಮೂಲಕ ಬೃಹತ್ ಮಟ್ಟದ ಜಾತ್ರಾ ಮಹೋತ್ಸವ ನಡೆಸಿದ್ದರು. ಮೂವತ್ತು ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕುವುದರ ಮೂಲಕ ಶಿಕ್ಷಣ ಕ್ರಾಂತಿಯನ್ನೇ ಮಾಡಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆಎಂದುಗಂಗಾಧರಮಹಾಸ್ವಾಮಿಗಳು ಸ್ಮರಿಸಿದರು. ಇದೇ ಸಂದರ್ಭದಲ್ಲಿ ದಾನಮ್ಮ ದೇವಿ ಪುರಾಣ ಮಂಗಲೋತ್ಸವ ಕಾರ್ಯಕ್ರಮ ನೆರವೇರಿತು.

ಸಾನಿಧ್ಯ ವಹಿಸಿದ್ದ ಮುನವಳ್ಳಿ ಯ ಮುರುಘರಾಜೇಂದ್ರ ಸ್ವಾಮೀಜಿ, ಬೈಲಹೊಂಗಲ ಮಡಿವಾಳೇಶ್ವರ ಮಠದ ಮಡಿವಾಳೇಶ್ವರ ಸ್ವಾಮೀಜಿ, ಶೆಗುಂಶಿಯ ಮಹಾಂತ ಪ್ರಭು ಮಹಾಸ್ವಾಮಿಗಳು, ಆಶೀರ್ವಚನ ನೀಡಿದರು.

ಗರಗ ಮಡಿವಾಳೇಶ್ವರ ಮಠದ ಪ್ರಶಾಂತ ದೇವರು, ವಿಜಾಪುರದ ಚರಮೂರ್ತಿ ಸ್ವಾಮೀಜಿ ಗಳಿಗೆ ಶ್ರೀಮಠದಿಂದ ಗೌರವ ಸಮರ್ಪಣೆ ಹಾಗೂ ಅತಿಥಿಗಳಾಗಿ ಆಗಮಿಸಿದ ಪ್ರಕಾಶ್ ಮುಗಬಸವ, ರಾಚಪ್ಪಬೊಳೆತ್ತಿನ,ಬಿ.ಎಸ್.ಗೂರನವರ,ವಿ.ಕೆ. ಬಡಿಗೇರ. ಎಸ್.ಎಸ್.ಮಾಟೊಳ್ಳಿ ಸೇರಿದಂತೆ ಗಣ್ಯರಿಗೆ ಗುರುರಕ್ಷೆ ದಯಪಾಲಿಸಲಾಯಿತು. ಪುರಾಣ ಪ್ರವಚನ ಉಣಬಡಿಸಿದ ಸಿದ್ದಾಪುರದ ಶಿವಲಿಂಗ ಶಾಸ್ತ್ರಿಗಳು. ಸಂಗೀತ ಸೇವೆ ಸಲ್ಲಿಸಿದ ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸುವ ಮಹಾಶಿವರಾತ್ರಿ



**ರಬಕವಿ-ಬನಹಟ್ಟಿ :** ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಬೇಡುವ ಶುಭ ದಿನವೇ ಮಹಾಶಿವರಾತ್ರಿಯ ಪವಿತ್ರ ಹಬ್ಬವಾಗಿದೆ ಎಂದು ಬನಹಟ್ಟಿಯ ಶರಣೆ ಅಶ್ವಿನಿ ಗೆದ್ದಪ್ಪನವರ ಹೇಳಿದರು.

ರಬಕವಿಯ ಶ್ರೀಮದ್ವೀರಶೈವ ಕುರುಹಿನಶೆಟ್ಟಿ ಸಮಾಜ ಬಾಂಧವರು ಶ್ರೀ ನೀಲಕಂಠೇಶ್ವರ ದೇವಸ್ಥಾನ ಸಮುದಾಯ ಭವನದಲ್ಲಿ ಹಮ್ಮಿಕೊಂಡಿರುವ ಮಹಾಶಿವರಾತ್ರಿಯ ಆಧ್ಯಾತ್ಮಿಕ ಪ್ರವಚನ ನೀಡಿ ಶಿವರಾತ್ರಿ ಉಪವಾಸ, ಶಿವನ ಆರಾಧನೆ, ಜಾಗರಣೆಗಳು ಪೌರಾಣಿಕ, ವೈಜ್ಞಾನಿಕ, ಆಧ್ಯಾತ್ಮಿಕ ಮಹತ್ವವನ್ನು ಹೊಂದಿವೆ. ಸಕಲ ಪಾಪಗಳ ನಿವಾರಣೆಗೆ ಶಿವಾರಾಧನೆ ಶ್ರೇಷ್ಠ ಎಂದರು.

ನೀಲಕಂಠೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಚೇರಮನ್ನ ಅಶೋಕ ಕುಚನೂರ ಅಧ್ಯಕ್ಷತೆ ವಹಿಸಿದ್ದರು.

ರಾಮಪುರ ಶಿವಾನಂದ ಕುಟೀರದ ಶಿವಾನಂದ ಭಸ್ಮೆ ಮಹಾರಾಜರು, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಮ. ಕೃ. ಮೇಗಾಡಿ, ಎಂ. ಎಂ. ಮಧುರಖಂಡಿ, ಈರಣ್ಣ ಗಣಮುಖಿ, ಉಮದಿ ಉಪಸ್ಥಿತರಿದ್ದರು.

ಕಲಾವಿದ ಈರಪ್ಪ ಮನ್ನಿ ಪ್ರಾರ್ಥಿಸಿದರು. ಮಲ್ಲೇಶಪ್ಪ ಕುಚನೂರ ಸ್ವಾಗತಿಸಿದರು. ಇಂದುಧರ ಬೆಳಗಲಿ ನಿರೂಪಿಸಿದರು. ಸಿದ್ದಪ್ಪ ಬೆಳಗಲಿ ವಂದಿಸಿದರು.

# ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಿರಿಯ ನಾಗರಿಕರ ಪ್ರತಿಭಟನೆ



**ಹುಬ್ಬಳ್ಳಿ :** ಹಿರಿಯ ನಾಗರಿಕರಿಗೆ ಪ್ರತಿ ತಿಂಗಳು ಹತ್ತು ಸಾವಿರ ರೂಪಾಯಿ ಸಹಾಯಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹುಬ್ಬಳ್ಳಿಯಲ್ಲಿ ಹಿರಿಯ ನಾಗರಿಕರು ಪ್ರತಿಭಟನಾ ಧರಣಿ ನಡೆಸಿದರು.

ನಗರದ ತಹಶಿಲ್ದಾರ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ನಿವೃತ್ತಿ ನೌಕರರ ಮತ್ತು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಮಾಡಿದ ಹಿರಿಯ ನಾಗರಿಕರು, ಮೌನವಾಗಿ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಹಿರಿಯ ನಾಗರಿಕರು ಕಾನೂನು ಬದ್ದವಾಗಿ ರಾಷ್ಟ್ರದ ಸಂಪತ್ತು ಎಂದು ಘೋಷಣೆ ಮಾಡಬೇಕು, ಆರ್ಥಿಕವಾಗಿ ದುರ್ಬಲರಾದ ಇಪಿಎಫ್ ನಿವೃತ್ತ ನೌಕರರು, ಕಾರ್ಮಿಕ ಕೂಲಿಕಾರರು ಹಾಗೂ ವೃದ್ದಾಪ್ಯವೇತನ ಪಡೆಯುತ್ತಿರುವವರಿಗೆ ಪ್ರತಿ ತಿಂಗಳು ಹತ್ತು ಸಾವಿರ ಸರ್ಕಾರ ನೀಡಬೇಕೆಂದು ಒತ್ತಾಯಿಸಿದರು. ಎಲ್ಲ ಹಿರಿಯ ನಾಗರಿಕರಿಗೆ ಉಚಿತ ವೈದ್ಯಕೀಯ ಚಿಕಿತ್ಸಾ ವೆಚ್ಚ, ಇನ್ಸೂರೆನ್ಸ್ ಸೌಲಭ್ಯ,

ರಾಷ್ಟ್ರ ಮತ್ತು ಎಲ್ಲ ರಾಜ್ಯ ಸರ್ಕಾರಗಳಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕ (ಮಂತ್ರಾಲಯ) ಇಲಾಖೆ ಸ್ಥಾಪನೆ ಮಾಡುವುದು, ಎಲ್ಲ ಪೋಲಿಸ್ ಪೋಲಿಸ್ ಠಾಣೆಯಲ್ಲಿ ಹಿರಿಯ ನಾಗರಿಕರ ಸಮಿತಿ ರಚಿಸಿ ಹಿರಿಯ ನಾಗರಿಕರ ಮೇಲಾಗುವ ದೌರ್ಜನ್ಯ ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ತಹಶಿಲ್ದಾರ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೂ ಮನವಿ ಸಲ್ಲಿಸಿದರು.

# ಸಾಮಾಜಿಕ ಕೆಲಸಗಳಿಗೆ ಸಂಘದ ಲಾಭದ ಬಳಕೆ



**ರಬಕವಿ-ಬನಹಟ್ಟಿ :** ರಬಕವಿ-ಬನಹಟ್ಟಿ ಹಾಗೂ ಜಮಖಂಡಿ ನಗರ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶಗಳ ಜನರು ಮಾಜಿ ಕೇಂದ್ರ ಸಚಿವ ದಿವಂಗತ ಸಿದ್ದೂ ನ್ಯಾಮಗೌಡರ ಮೇಲಿಟ್ಟ ಪ್ರೀತಿ, ವಿಶ್ವಾಸ, ಭರವಸೆಯಿಂದಾಗಿ ಸಿದ್ದೂ ನ್ಯಾಮಗೌಡ ಸೌಹಾರ್ದ ಸಹಕಾರಿ ಸಂಘವು ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ ರೂ. ನಾಲ್ಕು ನೂರು ಕೋಟಿಯಷ್ಟು ಠೇವಣಿಯನ್ನು ಹೊಂದಿದ್ದು, ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ. ಲಾಭಾಂಶವನ್ನು ಷೇರುದಾರರಿಗೆ ವಿತರಣೆ ಮಾಡುವುದರ ಜೊತೆಗೆ ಈ ಪ್ರದೇಶದಲ್ಲಿಯ ಸಾಮಾಜಿಕ ಕೆಲಸಗಳಿಗೂ ಹಣವನ್ನು ಬಳಕೆ ಮಾಡಲಾಗುವುದು ಎಂದು ಸಹಕಾರಿ ಸಂಘದ ಅಧ್ಯಕ್ಷ ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದರು.

ಗುರುವಾರ ಬನಹಟ್ಟಿಯಲ್ಲಿ ಸಿದ್ದೂ ನ್ಯಾಮಗೌಡ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬನಹಟ್ಟಿಯಲ್ಲಿ ಸಂಘದ ನಾಲ್ಕನೆಯ ಶಾಖೆಯನ್ನು ಆರಂಭಿಸಲಾಗಿದ್ದು , ಮುಂದಿನ ಹದಿನೈದು ದಿನಗಳಲ್ಲಿ ಮುಧೋಳದಲ್ಲಿ ಕೂಡ ಶಾಖೆಯನ್ನು ಆರಂಭಿಸಲಾಗುವುದು. ಮುಂದಿನ ವರ್ಷ ಮತ್ತೆ ಐದು ಶಾಖೆಗಳನ್ನು ಆರಂಭಿಸಲು ಪರವಾನಿಗೆಯನ್ನು ಪಡೆದುಕೊಳ್ಳಲಾಗುವುದು. ನ್ಯಾಮಗೌಡ ಸಹಕಾರಿ ಸಂಘವು ಮೊಬೈಲ್, ಇಂಟರನೆಟ್, ಕೋರ್ ಬ್ಯಾಂಕಿಂಗ್ ಸೌಲಭ್ಯದ ಜೊತೆಗೆ ಆಧುನಿಕ ಬ್ಯಾಂಕಿಂಗ್ ನ ಎಲ್ಲ ಸೌಲಭ್ಯಗಳನ್ನು ತನ್ನ ಗ್ರಾಹಕರಿಗೆ ನೀಡುತ್ತಿದೆ. ಸದಸ್ಯರು ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ನ್ಯಾಮಗೌಡ ತಿಳಿಸಿದರು.

ಕೆ.ಪಿ.ಸಿ.ಸಿ. ಕಿಸಾನ ಕಾಂಗ್ರೆಸ್ ರಾಜ್ಯ ಘಟಕದ ಸಂಚಾಲಕ ಸಿದ್ದೂ ಕೊಣ್ಣೂರ ಮಾತನಾಡಿ, ಬ್ಯಾಂಕಿನ ಆಡಳಿತ ಮಂಡಳಿಯವರು ಸಂಘಕ್ಕೆ ನಿಯಮಿತವಾಗಿ ಭೇಟಿ ನೀಡುತ್ತ ಸಂಘದ ಲೆಕ್ಕ ಪತ್ರಗಳ ಬಗ್ಗೆ ಗಮನ ನೀಡಬೇಕು. ಸಹಕಾರಿ ಸಂಘದಲ್ಲಿ ಯಾವುದೇ ರಾಜಕೀಯ ಬೇಡ ಎಂದು ತಿಳಿಸಿದರು.

ಪ್ರಾಚಾರ್ಯ ಬಸವರಾಜ ಕೊಣ್ಣೂರ, ಭೀಮಶಿ ಮಗದುಮ್ ಶುಭ ಹಾರೈಸಿದರು.

ಶರಣಬಸವ ಶಿವಾಚಾರ್ಯರು ಕಾರ್ಯಕ್ರಮ ಉದ್ಘಾಟಿಸಿದರು.

ವಿಶ್ವನಾಥ ಶಾಸ್ತ್ರಿಗಳು, ಮಲ್ಲಯ್ಯಸ್ವಾಮಿ ಹಿಡಕಲ್, ಈಶ್ವರ ಬಿದರಿ, ರಂಗನಗೌಡ ಪಾಟೀಲ, ಸುಭಾಸ ಭದ್ರನವರ, ರಾಜು ಅಂಬಲಿ, ಬಸವರಾಜ ದಲಾಲ, ನೀಲಕಂಠ ಮುತ್ತೂರ, ಮಲ್ಲಿಕಾರ್ಜುನ ಬಾಣಕಾರ, ಶ್ರೀಶೈಲ ಧಬಾಡಿ, ವರ್ಧಮಾನ ನ್ಯಾಮಗೌಡ, ಬಸವರಾಜ ನ್ಯಾಮಗೌಡ, ಹರ್ಷವರ್ಧನ ಪಟವರ್ಧನ ಸೇರಿದಂತೆ ಸಂಘದ ನಿರ್ದೇಶಕ ಮಂಡಳಿಯ ಸದಸ್ಯರು ಹಾಜರಿದ್ದರು.

# ಅಕ್ಕ ಮಹಾದೇವಿ ಮಹಿಳಾ ವಿವಿಯಲ್ಲಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ

**ವರದಿ:ಲಾಲಸಾಬ ಸವಾರಗೋಳ.**

**ವಿಜಯಪುರ :** ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ ಎಂಬ ಹಿರಿಮೆ ಹೊಂದಿರುವ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿ ಬಂದಿದೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸದರಿ ವಿಶ್ವವಿದ್ಯಾಲಯದ ಘಟಿಕೋತ್ಸವ ನಡೆಯುವ ಈ ಸಂದರ್ಭದಲ್ಲಿ ಗಂಭೀರ ಆರೋಪದ ಪ್ರಕರಣ ಬೆಳಕಿಗೆ ಬಂದಿದ್ದು , ಶೈಕ್ಷಣಿಕ ವಲಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮ್ಯಾನೇಜಮೆಂಟ್ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಎನ್.ಎಲ್. ವಿರುದ್ಧ ಸಂತ್ರಸ್ಥೆ ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ ಫೆಬ್ರುವರಿ 22 ರಂದೇ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲಸಚಿವರಿಗೆ ಲಿಖಿತ ದೂರು ನೀಡಿದ್ದಾಳೆ.

ಆರೋಪಿ ಪ್ರಾಧ್ಯಾಪಕ ತನಗೆ ಲೈಂಗಿಕ ಕಿರುಕುಳ ನೀಡಿದ್ದು , ಶಿಷ್ಯವೇತನಕ್ಕೂ ಸಹಿ ಹಾಕಿಲ್ಲ. ತನ್ನ ಲೈಂಗಿಕ ವಾಂಛೆಗೆ ಸಹಕರಿಸದ ಕಾರಣಕ್ಕೆ ನನ್ನ ವಿರುದ್ಧ ನಡತೆ ಸರಿ ಇಲ್ಲವೆಂದು ಪುಕಾರು ಹಬ್ಬಿಸುವುದಾಗಿಯೂ, ನನ್ನ ಶೈಕ್ಷಣಿಕ ಜೀವನ ಹಾಳು ಮಾಡುವ ಬೆದರಿಕೆ ಹಾಕುತ್ತಿದ್ದಾರೆ ಎಂದು ನೊಂದ ಸಂಶೋಧನಾ ವಿದ್ಯಾರ್ಥಿನಿ ಲಿಖಿತ ದೂರಿನಲ್ಲಿ ವಿವರಿಸಿದ್ದಾಳೆ.

ಇಷ್ಟಕ್ಕೂ ಪ್ರೊ. ಮಲ್ಲಿಕಾರ್ಜುನ ನನ್ನ ಸಂಶೋಧನಾ ಮಾರ್ಗದರ್ಶಕರಲ್ಲ. ನನ್ನ ಸಂಶೋಧನಾ ಮಾರ್ಗದರ್ಶಕರು ಸೇವಾ ನಿವೃತ್ತಿ ಹೊಂದಿದ ಬಳಿಕ ವಿಭಾಗ ಮುಖ್ಯಸ್ಥರಾಗಿರುವ ಮಲ್ಲಿಕಾರ್ಜುನ ಮ್ಯಾನೇಜಮೆಂಟ್ ವಿಭಾಗದ ಮುಖ್ಯಸ್ಥರಾಗಿದ್ದು , ಕಳೆದ ಕೆಲವು ತಿಂಗಳಿಂದ ಕಿರುಕುಳ ನೀಡುತ್ತಿದ್ದಾರೆ ಎಂದು ನೋವು ನಿವೇದಿಸಿಕೊಂಡಿದ್ದಾಳೆ.

ಆರೋಪಿ ಪ್ರೊಫೇಸರ್ ಅವಾಚ್ಯ ಶಬ್ಧಗಳಿಂದ ನಿಂದಿಸಿರುವ ಹಾಗೂ ದೈಹಿಕವಾಗಿ ಸ್ಪರ್ಶಿಸಲು ಮುಂದಾಗುವುದು, ತನ್ನ ಉಡುಗೆ ಬಗ್ಗೆ ಮಾತನಾಡುವುದಲ್ಲದೇ ಓದಲು ಗ್ರಂಥಾಲಯಕ್ಕೆ ಹೋಗದೇ ನನ್ನ ಚೇಂಬರಿಗೆ ಬರುವಂತೆ ಆಹ್ವಾನಿಸುತ್ತಾನೆ ಎಂದು ದೂರಿದ್ದಾಳೆ.



ನಾನು ಸಂಶೋಧನೆ ಸಂದರ್ಭದಲ್ಲಿ ಮ್ಯಾನೇಜಮೆಂಟ್ ವಿಭಾಗದ ಮುಖ್ಯಸ್ಥನಾಗಿರುವ ಆರೋಪಿಯಿಂದ ಅನುಭವಿಸಿರುವ ಲೈಂಗಿಕ ಕಿರುಕುಳದ ಕುರಿತು ನನ್ನ ಪಾಲಕರು, ಮಾರ್ಗದರ್ಶಕರಿಗೆ ಮಾಹಿತಿ ನೀಡಿದ್ದೆ. ಆದರೆ ಇದೀಗ ಆರೋಪಿಯಿಂದ ಅತಿರೇಕದ ವರ್ತನೆ ಮಿತಿ ಮೀರಿದ್ದು , ಅನಿವಾರ್ಯವಾಗಿ ನಾನು ಲಿಖಿತ ದೂರು ನೀಡಲು ಮುಂದೆ ಬಂದಿರುವುದಾಗಿ ವಿವರಿಸಿದ್ದಾಳೆ.

ಆರೋಪಿ ಪ್ರೊಫೇಸರ್ ತನ್ನ ವಿರುದ್ಧ ದೂರು ನೀಡಲು ಮುಂದಾಗಿರುವ ನನ್ನ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದು , ಮಾನಸಿವಾಗಿ ಕುಗ್ಗುವಂತೆ ಮಾಡಿದೆ. ಇದು ನನ್ನ ಸಂಶೋಧನೆಯ ಶೈಕ್ಷಣಿಕ ಭವಿಷ್ಯದ ಬಗ್ಗೆ ಆತಂಕ ಉಂಟಾಗಿದೆ ಎಂದು ಹೇಳಿಕೊಂಡಿದ್ದಾಳೆ.

ಈ ಕುರಿತು ಕೂಡಲೇ ಸಮಗ್ರ ತನಿಖೆ ನಡೆಸಿ, ನನಗೆ ಆಗಿರುವ ಅನ್ಯಾಯದ ಕುರಿತು ನ್ಯಾಯ ಕೊಡಿಸುವಂತೆ ಮನವಿ ಮಾಡಿದ್ದಾಳೆ. ಈ ಮಧ್ಯೆ ವಿದ್ಯಾರ್ಥಿನಿ ದೂರು ನೀಡಿದ ಬಳಿಕ ವಿಶ್ವವಿದ್ಯಾಲಯ ಆರೋಪಿ ವಿರುದ್ಧ ಕೈಗೊಂಡ ಕ್ರಮಗಳೇನು ಎಂಬುದರ ಬಗ್ಗೆ ಯಾವುದೇ ನಿಖರ ಮಾಹಿತಿಯನ್ನು ಸಂತ್ರಸ್ಥೆಗೆ ಅಧಿಕೃತವಾಗಿ ನೀಡಿಲ್ಲ. ಆದರೆ ಸದರಿ ಪ್ರಕರಣದ ದೂರನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆ ಆಲಿಸುವ ಆಂತರಿಕ ದೂರು ಸಲಹಾ ಸಮಿತಿಗೆ ವರ್ಗಾಯಿಸಿದ್ದಾಗಿ ಮೌಖಿಕ ಮಾಹಿತಿ ನೀಡಿದ್ದಾರೆ.

ಪ್ರಕರಣದ ಕುರಿತು ವಿಶ್ವವಿದ್ಯಾಲಯವೂ ಕೂಡ ಅಧಿಕೃತವಾಗಿ ಯಾವುದೇ ಮಾಹಿತಿಯನ್ನು ನೀಡಿಲ್ಲ. ಈ ಕುರಿತು ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಕರೆ ಮಾಡಿದರೂ ಕುಲಪತಿ ಪ್ರೊ. ತುಳಸಿಮಾಲಾ, ಆರೋಪಿ ಪ್ರೊ. ಮಲ್ಲಿಕಾರ್ಜುನ ಇಬ್ಬರೂ ಕರೆ ಸ್ವೀಕರಿಸಿಲ್ಲ.

ಗಮನೀಯ ಅಂಶ ಎಂದರೆ ರಾಜ್ಯದಲ್ಲಿ ಮಹಿಳೆಯರಿಗೆ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವ ಸದಾಶಯದಿಂದಲೇ ಜನ್ಮ ತಳೆದಿರುವ ರಾಜ್ಯದ ಮಹಿಳೆಯರಿಗಾಗಿ ಪ್ರತ್ಯೇಕವಾಗಿರುವ ಏಕೈಕ ಮಹಿಳಾ ವಿಶ್ವವಿದ್ಯಾಲಯ.

ಮಾರ್ಚ 11 ರಂದು ವಿಶ್ವವಿದ್ಯಾಲಯ 15 ನೇ ಘಟಿಕೋತ್ಸವ ಸಮಾರಂಭಕ್ಕೆ ವೇದಿಕೆ ಸಿದ್ಧಗೊಳ್ಳುತ್ತಿದೆ. ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರು ಆಗಮಿಸುವ ನಿರೀಕ್ಷೆ ಇರುವ ಈ ಸಂದರ್ಭದಲ್ಲೇ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮೊದಲ ಬಾರಿಗೆ ವಿದ್ಯಾರ್ಥಿನಿಯರಿಗೆ ಪ್ರಾಧ್ಯಾಪಕರು ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿಬಂದಿರುವುದು ಶೈಕ್ಷಣಿಕ ವಲಯದಲ್ಲಿ ಆತಂಕ ಸೃಷ್ಟಿಸಿದೆ.

# ನಾರಿ ಶಕ್ತಿವಂಧನಾ ಕಾರ್ಯಕ್ರಮ ವಿಕ್ಷಣೆ





**ಬಾಗಲಕೋಟೆ :** ಕೋಲ್ಕತ್ತಾದಲ್ಲಿ ಪ್ರಧಾನಿ ನರೇಂದ್ರ ಮೋದಿಜಿಯರಿಂದ ಉಧ್ಘಾಟನೆಗೊಂಡ ನಾರಿ ಶಕ್ತಿ ವಂಧನಾ ಕಾರ್ಯಕ್ರಮದ ನೇರ ಪ್ರಸಾರವನ್ನು ಬಿ.ವ್ಹಿ.ವ್ಹಿ.ಸಂಘ ಮಿನಿ ಸಭಾಂಗಣದಲ್ಲಿ ವಿಕ್ಷಣೆ ಮಾಡಲಾಯಿತು.

ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ತ್ ಸದಸ್ಯ ಎಸ್.ವ್ಹಿ.ಸಂಕನೂರ, ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ, ವಿಧಾನ ಪರಿಷತ್ತ್ ಸದಸ್ಯರಾದ ಹನಮಂತ ನಿರಾಣಿ, ನಾರಿ ಶಕ್ತಿ ವಂಧನಾ ಅಭಿಯಾನದ ಜಿಲ್ಲಾ ಉಸ್ತುವಾರಿ ಸುಜಾತ ಶಿಂಧೆ, ನಗರ ಸಂಚಾಲಕ ಶಶಿಕಲಾ ಮಜ್ಜಗಿ, ಸಹ ಸಂಚಾಲಕಿ ಶಿವಲೀಲಾ ಪಟ್ಟಣಶೆಟ್ಟಿ, ಮಹಿಳಾ ಪದಾಧಿಕಾರಿಗಳಾದ ಮಂಜುಳಾ ಮಿಸ್ಕಿನ,ನಗರಸಭೆ ಸದಸ್ಯೆ ಪ್ರೇಮಾ ಅಂಬಿಗೇರ,

ಬೆಳಗಾವಿ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ,

ಮಲ್ಲಯ್ಯ ಮೂಗನೂರಮಠ, ಜಿಲ್ಲಾ ಮಾಧ್ಯಮ ವಕ್ತಾರ ಸತ್ಯನಾರಯಣ ಹೆಮಾದ್ರಿ, ,ಬಸವರಾಜ ಹುನಗುಂದ,ಉಮೇಶ ಹಂಚಿನಾಳ, ಚುನಾವಣೆ ವಿಸ್ತಾರಕ ಹರೀಷ ಮಲ್ಲಾರಿ,ಶ್ರೀಧರ ನಾಗರಬೆಟ್ಟ, ಮಲ್ಲಿಕಾರ್ಜುನ ಕಾಂಬಳೆ, ಶಿವು ಸುರುಪುರ, ಸೇರಿದಂತೆ ಅನೇಕರು ಇದ್ದರು.

## ಢಪಳಾಪುರ ವೈಭವ ಕಾರ್ಯಕ್ರಮ

# ಆದರ್ಶ ಮಕ್ಕಳನ್ನು ರೂಪಿಸಿಸುವದು ಪಾಲಕರ ಮತ್ತು ಶಿಕ್ಷಕ ಜವಾಬ್ದಾರಿ: ಅಕ್ಷಯಾ ಗೋಖಲೆ

**ಮಹಾಲಿಂಗಪುರ :** ಇಂದು ಹಳ್ಳಿಯಿಂದ ದಿಲ್ಲಿಯವರೆಗೆ ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳಿವೆ. ಆದರೆ ಮಕ್ಕಳಿಗೆ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳು, ನೈತಿ–ಕತೆ, ಸಂಸ್ಕಾರ, ಸಂಸ್ಕೃತಿಯುಳ್ಳ ಆದರ್ಶ ಮಕ್ಕಳನ್ನು ರೂಪಿಸುವದು ಶಾಲೆಯಲ್ಲಿ ಶಿಕ್ಷಕರ, ಮನೆಯಲ್ಲಿ ಪಾಲಕರ, ಸಮಾಜದಲ್ಲಿ ಗುರುಹಿರಿಯರ ಜವಾಬ್ದಾರಿಯಾಗಿದೆ ಎಂದು ಉಡುಪಿಯ ಖ್ಯಾತ ವಾಗ್ಮಿ ಕುಮಾರಿ ಅಕ್ಷಯಾ ಗೋಖಲೆ ಹೇಳಿದರು.

ಸಮೀಪದ ರನ್ನಬೆಳಗಲಿಯ ಢಪಳಾಪುರ ವಿದ್ಯಾವಿಹಾರ ಸಿಬಿಎಸ್ಇ ಶಾಲೆ ಹಾಗೂ ಪಿಯುಸಿ ಕಾಲೇಜು ಆವರಣದಲ್ಲಿ ಜರುಗಿದ ಢಪಳಾಪುರ ವೈಭವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಇಂದಿನ ಮಕ್ಕಳಿಗೆ ದೇಶಭಕ್ತರ ಕಥೆ ಹೇಳುತ್ತಾ ಜೀವಕ್ಕಿಂತ ಸಮಾಜ ದೊಡ್ಡದು, ಜೀವನಕ್ಕಿಂತ ದೇಶ ದೊಡ್ಡದು ಎಂಬ ಆದರ್ಶ ಬೆಳೆಸುವುವದು ಇಂದು ಅವಶ್ಯಕವಾಗಿದೆ.

ಮಕ್ಕಳಿಗೆ ದೇವರ ಕಲ್ಪನೆಯನ್ನು ಕಟ್ಟಿಕೊಡುವಲ್ಲಿ ಇಂದಿನ ಪಾಲಕರು ಎಡವುತ್ತಿದ್ದಾರೆ. ತುತ್ತು ನೀಡುತ್ತಾ ತಾಯಂದಿರು ರಾಮ, ಕೃಷ್ಣ, ಶಿವಾಜಿ, ವಿವೇಕಾನಂದ, ಸುಭಾಸ್ ಚಂದ್ರ ಬೋಸ್‌ರಂಥಯ ಆದರ್ಶ ಮಾಹನ್ ವ್ಯಕ್ತಿಗಳ ಕಥೆ ಹೇಳಬೇಕಾಗಿದೆ. ಆ ಮೂಲಕ




ಮಕ್ಕಳಿಗೆ ಹೆತ್ತವರ ಕಷ್ಟದ ಪರಿಚಯ ಮಾಡಿ, ಮನೆಯಿಂದ ದೊಡ್ಡವನಾಗಿ ಹೊರಹೋದ ಮಗ ಮತ್ತೆ ಮನೆಗೆ ಬರುವ ಸಂಸ್ಕಾರ ನೀಡಬೇಕಾಗಿದೆ. ಆ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಮೌಲ್ಯಯುತ ಸಿಬಿಎಸ್ಇ ಶಿಕ್ಷಣ ನೀಡುತ್ತಿರುವ ವಿವೇಕ ಢಪಳಾಪುರ ಅವರ ಕಾರ್ಯ ಶ್ಲಾಘನೀಯ ಎಂದರು.

ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಮಾತನಾಡಿ ಮಠ, ಮಂದಿರಗಳಿಗೆ ದಾನ ಮಾಡುವ ಬದಲು ಜೀವಂತ ದೇವಾಲಯಗಳಾದ ಶಾಲೆಗಳಿಗೆ ದೇಣಿಗೆ ನೀಡಬೇಕಾಗಿದೆ ಎಂದರು.

ಎರಡೂ ಕಾಲುಗಳಿಲ್ಲದ ಖ್ಯಾತ ವೈದ್ಯೆ ಡಾ.ಮಹಾಜಬೀನ್ ಮಾಡರ್ಕರ್ ಮಾತನಾಡಿ ಸಾಧಿಸಬೇಕೆಂಬ ಛಲವಿದ್ದವರಿಗೆ ಯಾವುದು ಅಸಾಧ್ಯವಲ್ಲ, ಅಚಲವಾದ ಛಲದಿಂದ ಎಲ್ಲವನ್ನೂ ಸಾಧಿಸಬಹುದು, ಎಲ್ಲಾ ಅವಮಾನಗಳನ್ನು ದಾಟಿ ಬಂದ ನಾನೇ ಅದಕ್ಕೆ ಜೀವಂತ ಉದಾಹರಣೆ ಎಂದರು.

ಬಸವರಾಜ ಢಪಳಾಪುರ ಅಧ್ಯಕ್ಷತೆವಹಿಸಿದ್ದರು. ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ, ಡಾ.ಅಜಿತ ಕನಕರಡ್ಡಿ, ಡಾ.ಸಾಗರ ತೆಕ್ಕನ್ನವರ, ಕಾಶೀನಾಥ ಕಂಕಾಳೆ, ಸಂಸ್ಥೆಯ ಕಾರ್ಯದರ್ಶಿ ವಿವೇಕ ಢಪಳಾಪುರ, ಕವಿತಾ ಢಪಳಾಪುರ, ಪ್ರಾಚಾರ್ಯ ಲೂಯಿಸ್ ಬರೆಟ್ಟೊ ವೇದಿಕೆಯಲ್ಲಿದ್ದರು. ನಂತರ ಮಕ್ಕಳಿಂದ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು.

# ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ನೀಡಿ: ಸಂಗಮೇಶ ಮುರ್ಕಾತಿಹಾಳ

**ಮಹಾಲಿಂಗಪುರ :** ಇಂದಿನ ಮಕ್ಕಳಿಗೆ ಮೌಲ್ಯಯುತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸುವುದು ಬಹಳ ಅವಶ್ಯಕವಾಗಿದೆ ಎಂದು ದೈಹಿಕ ಶಿಕ್ಷಕ ಸಂಗಮೇಶ ಮುರ್ಕಾತಿಹಾಳ ಹೇಳಿದರು.

ಸಮೀಪದ ಮದಭಾವಿ ಗ್ರಾಮದ ಶಾಂತಿನಿಕೇತನ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯ ಶಾಂತಿನಿಕೇತನ ಚಿಣ್ಣರ ಸಂಭ್ರಮ–5 ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನ ವಿತರಣಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಅತಿ ಕಡಿಮೆ ಫೀನಲ್ಲಿ ಉತ್ತಮ ಶಿಕ್ಷಣ ನೀಡುತ್ತಿರುವ ಶಾಂತಿನಿಕೇತನ ಶಾಲೆಯ ಆಡಳಿತ ಮಂಡಳಿ ಮತ್ತು ಇಲ್ಲಿನ ಶಿಕ್ಷಕರ ಬಳಗದ ಕಾರ್ಯವು ಶ್ಲಾಘನೀಯವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪತ್ರಕರ್ತ ಚಂದ್ರಶೇಖರ ಮೋರೆ ಮಾತನಾಡಿ ಶಾಂತಿನಿಕೇತನ ಶಾಲೆಯು ಪ್ರಾರಂಭವಾದ ಒಂದೇ ವರ್ಷದಲ್ಲಿ ಕೋವಿಡ್ ಮಹಾಮಾ–ರಿಯ ಕಠಿಣ ದಿನಗಳನ್ನು ಎದುರಿಸಿದ ಶಾಲೆಯು ಕೇವಲ ಐದು ವರ್ಷಗಳಲ್ಲಿ



ಮದಭಾಂವಿ, ಸಂಗಾನಟ್ಟಿ, ಮಾರಾಪೂರ, ಢವಳೇಶ್ವರ, ಸೈದಾಪೂರ ಗ್ರಾಮಗಳ ಪಾಲಕರ ಮೆಚ್ಚುಗೆಯನ್ನು ಗಳಿಸಿ ಇಂದು ಗ್ರಾಮೀಣ ಭಾಗದಲ್ಲಿ ಮಾದರಿ ಆಂಗ್ಲ ಮಾಧ್ಯಮಶಾಲೆಯಾಗಿ ಹೊರಹೊಮ್ಮಿದ್ದು ಶಾಲೆಯ ಆಡಳಿತ ಮಂಡಳಿಯ ಶ್ರಮ ಮತ್ತು ಶಿಕ್ಷಕರ ಬೋಧನಾ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.

ಪಾಲಕರು ತಮ್ಮ ಮಕ್ಕಳನ್ನು ಮೋಬೈಲ್ ಮತ್ತು ಟಿವ್ಹಿಗಳಿಂದ ದೂರವಿಟ್ಟು, ಉತ್ತಮ ಸಂಸ್ಕಾರ ನೀಡಬೇಕು. ಮಕ್ಕಳಿಗಾಗಿ ಆಸ್ತಿ ಮಾಡದೇ ಮಕ್ಕಳನ್ನೆ ಆಸ್ತಿಯನ್ನಾಗಿಸಿ. ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸುತ್ತಿರುವ ಶಾಂತಿನಿಕೇತನ ಶಾಲೆಯ ಬೆಳವಣಿಗೆಗೆ ಗ್ರಾಮಸ್ಥರ ಸಹಕಾರ ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆವಹಿಸಿದ್ದ ಸಂಸ್ಥೆಯ ನಿರ್ದೇಶಕರು, ಪಿಯು ಕಾಲೇಜಿನ ಉಪನ್ಯಾಸ ರವಿ ಕಲ್ಲೋಳ್ಳಿ ಮಾತನಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ನಾಗಪ್ಪ ಡುಮ್ಮನ್ನವರ, ಕಾರ್ಯದರ್ಶಿ ಮಲ್ಲಪ್ಪ ಅರಭಾಂವಿ, ನಿರ್ದೇಶಕರಾದ ಜಯಶ್ರೀ ತಿಮ್ಮಾಪೂರ, ಪೂಜಾ ಹಲಕಗಿಗೌಡರ, ಪಾರ್ವತಿ ಮುರ್ಕಾತಿಹಾಳ, ಶ್ರೀಶೈಲ ವಗ್ಗರ, ಸಿದ್ದಲಿಂಗ ಮಸಗುಪ್ಪಿ, ಮಹಾಂತೇಶ ಹಲಗಿಗೌಡರ, ಮುಖ್ಯಶಿಕ್ಷಕ ಎಂ.ಎಸ್.ವಗ್ಗರ ಸೇರಿದಂತೆ ಹಲವರು ಇದ್ದರು.

# ಕಠಿಣ ಪರಿಶ್ರಮವೇ ಸಾಧನೆಯ ಮಂತ್ರ: ಶಾಸಕ ಸಿದ್ದು ಸವದಿ

**ಮಹಾಲಿಂಗಪುರ :** ಪ್ರಪಂಚದಲ್ಲಿ ವಿದ್ಯೆ, ಸಾಧನೆ ಲಾಟರಿಯಿಂದ ಪಡೆಯಲಾಗುವುದಿಲ್ಲ, ಯಾವುದೇ ಸಾಧನೆಗೆ ಕಠಿಣ ಪರಿಶ್ರಮವೇ ಮೂಲಮಂತ್ರವಾಗಿದೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಚಿಮ್ಮಡ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ 10ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಕಲಿಕೆಯ ಹಿಂದೆ ತಂದೆ–ತಾಯಿ, ಶಿಕ್ಷಕರು, ಶಾಲಾ ಸಮೀತಿ ಸೇರಿದಂತೆ ಹಲವಾರು ಜನರ ಪರಿಶ್ರಮ ಇರುತ್ತದೆ, ನಾವು ಉತ್ತಮ ಸಾಧನೆ ಮಾಡುವ ಮೂಲಕ ಅವರಿಗೆ ಗೌರವ ಕೊಡಬೇಕು, ಉತ್ತಮ ಪ್ರಜೆಯಾಗುವ ಮೂಲಕ ದೇಶದ ಋಣವನ್ನು ತೀರಿಸಬೇಕು ಎಂದರು.

ಸಾನಿಧ್ಯವಹಿಸಿದ್ದ ಸ್ಥಳಿಯ ವಿರಕ್ತಮಠದ ಪ್ರಭು ಮಹಾಸ್ವಾಮಿಜಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಕಲಿಕೆಗೆ ಪರೀಶ್ರಮದೊಂದಿಗೆ ಉತ್ತಮ ವಾತಾವರಣವೂ ಅಷ್ಟೇ ಮಹತ್ವದ್ದಾಗಿದೆ. ಅಯೋಗ್ಯರ ಸಂಗ ಮಾಡದೇ, ತಂದೆ, ತಾಯಿ, ಗುರುಗಳ ಮಾರ್ಗದರ್ಶನದಲ್ಲಿ ನಮ್ಮ ಕಲಿಕೆ ಮುಂದುವರೆದಲ್ಲಿ ಸಾಧನೆ ಕಟ್ಟಿಟ್ಟ ಬುತ್ತಿ ಎಂದರು.



ಸಿಆರ್‌ಪಿ ಸಮನ್ವಯ ಅಧಿಕಾರಿ ದ್ರಾಕ್ಷಾಯಿಣಿ ಮಂಡಿ, ಮುಖ್ಯ ಗುರುಮಾತೆ ಎಂ.ಎಸ್.ಜಿಟ್ಟಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳನ್ನು ಸತ್ಕರಿಸಿ ಗೌರವಿಸಲಾಯಿತು.

ಓಂಕಾರ ಯರಗಟ್ಟಿಕರ ಸಾನಿಧ್ಯವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ಅಧ್ಯಕ್ಷತೆವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಪಂ ಮಾಜಿ ಅಧ್ಯಕ್ಷ ಆನಂದ ಕವಟಿ, ಪ್ರಕಾಶ ಪಾಟೀಲ, ಎಪಿಎಂಸಿ ನಿರ್ದೇಶಕ ಪ್ರಭು ಮುಧೋಳ, ಮನೋಜ ಹಟ್ಟಿ, ಬಾಳಪ್ಪ ಗಡೆಪ್ಪನವರ, ನಾಗಪ್ಪ ಆಲಕನೂರ, ಸುರೇಶ ಪೂಜೇರಿ, ಪ್ರಾಧ್ಯಾಪಕ ಡಾ.ಎಚ್.ಎಂ.ಕುಂಬಾರ, ಪತ್ರಕರ್ತ ಇಲಾಹಿ ಜಮಖಂಡಿ ಭಾಗವಹಿಸಿದ್ದರು.



# ಡಾ. ಮಮತ ಅವರಿಗೆ ಪ್ರತಿಷ್ಠಿತ ಹೆಮ್ಮೆಯ 'ಕನ್ನಡತಿ' ಪ್ರಶಸ್ತಿಯ ಗರಿ

**ರಬಕವಿ–ಬನಹಟ್ಟಿ :** ಕರ್ನಾಟಕದ ಕವಿವಾಣಿ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನೀಡಲಾಗುತ್ತಿರುವ ರಾಜ್ಯ ಮಟ್ಟದ ಪ್ರತಿಷ್ಠಿತ 'ಹೆಮ್ಮೆಯ ಕನ್ನಡತಿ' ಪ್ರಶಸ್ತಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ, ವಿಶ್ವ ದಾಖಲೆ ಹಾಗೂ ರಾಜ್ಯ ದಾಖಲೆ ನಿರ್ಮಿಸಿರುವ ಮತ್ತು ರಾಜ್ಯ, ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಡಾ. ಮಮತ ಹೆಚ್. ಎ. ಅವರನ್ನು ಆಯ್ಕೆ ಮಾಡಲಾಗಿದೆಯೆಂದು ಕವಿವಾಣಿ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಕೆ. ಎನ್. ಅಕ್ರಮ್ ಪಾಷಾರವರು ತಿಳಿಸಿದ್ದಾರೆ. ಪ್ರಶಸ್ತಿ ಪಡೆದ ಮಮತಾ ಅವರಿಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆಯ ಬಳಗದಿಂದ ಹಾರ್ದಿಕ ಅಭಿನಂದನೆಗಳು.

# ಯುವ ಮತದಾರರೊಂದಿಗೆ ಸಂವಾದ

# ಸರ್ವೋತ್ತಮ ಅಭಿವೃದ್ಧಿಗೆ ಮೋದಿ ಅವಶ್ಯ: ಸಂಕನೂರ

**ಬಾಗಲಕೋಟೆ :** 21ನೇ ಶತಮಾನಕ್ಕೆ ಬೇಕಾಗುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) ಕರ್ನಾಟಕದಲ್ಲೂ ಜಾರಿ ಅಗತ್ಯವಾಗಿದ್ದು ಭಾರತದ ಸರ್ವೋತ್ತಮ ಅಭಿವೃದ್ಧಿಗೆ ಮೋದಿ ಅವಶ್ಯ ಎಂದು ವಿಧಾನ ಪರಿಷತ್ತ್ ಸದಸ್ಯ ಎಸ್.ವ್ಹಿ.ಸಂಕನೂರ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ. ಸಂಘದ ಪಾಲಿಟೇಕ್ನೀಕ್ ಕಾಲೇಜು ಸಭಾಂಗಣದಲ್ಲಿ ಭಾರತೀಯ ಜನತಾ ಪಾರ್ಟಿ ಯಿಂದ ಹಮ್ಮಿಕೊಂಡ ಯುವ ಮತದಾರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ವಿಷಯ ಪ್ರಮುಖರಾಗಿ ಮಾತನಾಡಿದರು.

ಭಾರತದಲ್ಲಿ 3 ಶಿಕ್ಷಣ ನೀತಿಗಳು ಜಾರಿಗೆ ಬಂದಿವೆ, ಅವುಗಳಲ್ಲಿ 68ರಲ್ಲಿ ಇಂದಿರಾ ಗಾಂಧಿ, 86ರಲ್ಲಿ ರಾಜೀವ ಗಾಂಧಿ ಏರಡನೆ ಶಿಕ್ಷಣ ನೀತಿ ಜಾರಿಗೆ ತಂದಿದ್ದರು ಅದಾದ 34 ವರ್ಷಗಳ ಬಳಿಕೆ ಪ್ರಧಾನಿ ನರೇಂದ್ರ ಮೋದಿಯವರ 21 ಶತಮಾನಕ್ಕೆ ಬೇಕಾಗುವ ಭವ್ಯ ಭಾರತ ಬೆಳಗುವ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ( ಎನ್.ಇ.ಪಿ) ಜಾರಿಗೆ ತಂದರು. ಆದರೆ ಕರ್ನಾಟಕ ಸರಕಾರ ತನ್ನದೆ ಒಂದು ನೀತಿ ಮಾಡಲು ಹೊರಟಿರುವುದು ಸರಿಯಲ್ಲಾ, ದೇಶದ ಉತ್ತಮ ಭವಿಷ್ಯಕ್ಕಾಗಿ ಎನ್.ಇ.ಪಿ ಅಗತ್ಯವಾಗಿದೆ,

ಪ್ರಧಾನಿ ಮೋದಿಯವರು ಶಿಕ್ಷಣ ರಂಗದಲ್ಲಿ ಅನೇಕ ಯೋಜನಗಳ





ಮೂಲಕ ಅಗಾದ ಬದಲಾವಣೆಗಳನ್ನು ತಂದಿದ್ದಾರೆ, ವಿದ್ಯಾರ್ಥಿಗಳಿಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ದೃಷ್ಟಿಯಿಂದ ಅತ್ಯಾಧುನಿಕ ಲ್ಯಾಭಗಳನ್ನು ಸ್ಥಾಪನೆ ಮಾಡಿದರು, ಎಲ್ಲ ರಂಗದಲ್ಲೂ ಮೋದಿ ದೇಶದ ಪ್ರಗತಿಗಾಗಿ ಅನೇಕ ಕೆಲಸಗಳನ್ನು ಮಾಡಿದ್ದಾರೆ ಎಂದರು.

ಪ್ರಸ್ತಾವಿಕ ಮಾತನಾಡಿದ ವಿಧಾನ ಪರಿಷತ್ತ್ ಸದಸ್ಯ ಹನಮಂತ ನಿರಾಣಿ ಕೇಂದ್ರ ಸರಕಾರ ಸಾಧನೆಗಳನ್ನು ಯುವ ಮತದಾರ–ರಿಗೆ ತಿಳಿಸುವ ಕಾರ್ಯಕ್ರಮವಾಗಿದ್ದು, ದೇಶದ ಅಭಿವೃದ್ಧಿಯೆ ನಮ್ಮ ಮೂಲ ಅಧ್ಯತೆಯಾಗಿದ್ದು, ದೇಶದ ಸರ್ವಾಂಗಿಣ ಅಭಿವೃದ್ಧಿಯಲ್ಲಿ ಎಲ್ಲರೂ ಕೈ ಜೋಡಿಸೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿ ಮಾತನಾಡಿದ ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ.

ಮುಂದಿನ 50 ವರ್ಷಗಳ ಯುವ ಸಮುದಾಯಕ್ಕೆ ಬೇಕಾಗುವ ಶಿಕ್ಷಣ ಸೌಲಭ್ಯ, ಉದ್ಯೋಗಗಳ ದೂರದೃಷ್ಠಿಯನ್ನುಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿಯವರು ಅನೇಕ ಯೋಜನೆಗಳನ್ನು ತಂದಿದ್ದಾರೆ, ಮುಂಬರುವ ಲೋಕಸಭೆಯಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಮೊತ್ತಮ್ಮೆ ನರೇಂದ್ರ ಮೋದಿಯವರು ಪ್ರಧಾನಿಯಾಗುವುದು ನಿಶ್ಚಿತ, 2047ಕ್ಕೆ ಪ್ರಪಂಚದ ಮೊದಲನೇ ಶ್ರೇಣಿ ಅಭಿವೃದ್ಧಿ ರಾಷ್ಟ್ರವಾಗಿ ಭಾರತ ತಲೆ ಏತ್ತಲಿದೆ ಎಂದು ತಿಳಿಸಿದ ಅವರು ಯುವ ಮತದಾರರೊಂದಿಗೆ ಅಭಿವೃದ್ಧಿಗಾಗಿ ಅನೇಕ ಸಲಹೆಗಳ ಕುರಿತು ಚರ್ಚಿಸಿದರು.

> “ ಲೋಕಸಭೇ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿ, ನರೇಂದ್ರ ಮೋದಿ ಮೊತ್ತಮ್ಮೆ ಪ್ರಧಾನಿಯಾಗುವುದು ನಿಶ್ಚಿತ, 2047ಕ್ಕೆ ಪ್ರಪಂಚದ ಮೊದಲನೇ ಶ್ರೇಣಿ ಅಭಿವೃದ್ಧಿ ರಾಷ್ಟ್ರವಾಗಿ ಭಾರತ ತಲೆ ಏತ್ತಲಿದೆ.
>
> – ಡಾ.ವೀರಣ್ಣ ಚರಮತಿಮಠ
> ಮಾಜಿ ಶಾಸಕರು

ಕಾರ್ಯಕ್ರಮದಲ್ಲಿ ಬೆಳಗಾವಿ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಮಲ್ಲಯ್ಯ ಮೂಗನೂರಮಠ, ಜಿಲ್ಲಾ ಮಾಧ್ಯಮ ವಕ್ತಾರ ಸತ್ಯನಾರಯಣ ಹೆಮಾದ್ರಿ, ,ಬಸವರಾಜ ಹುನಗುಂದ,ಉಮೇಶ ಹಂಚಿನಾಳ, ಮಲ್ಲಿಕಾರ್ಜುನ ಕಾಂಬಳೆ, ಚುನಾವಣೆ ವಿಸ್ತಾರಕ ಹರೀಷ ಮಲ್ಲಾ–ರಿ,ಶ್ರೀಧರ ನಾಗರಬೆಟ್ಟ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಂತರ ಯುವ ಮತದಾರರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ದೇಶದ ಅಭಿವೃದ್ಧಿ ಕುರಿತು ಚರ್ಚಿಸಲಾಯಿತು.

## ಮಹಿಳಾ ಕಾಲೇಜಿನಲ್ಲಿ ಕನ್ನಡ ಕಲರವ । ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸಪ್ತಭಾಷೆಗಳ ಸಪ್ತಾಹ ಸಮಾರೋಪ

# ಭಾಷೆ ಸಾಮರಸ್ಯದ ನೆಲೆಯಾಗಲಿ: ಡಾ.ಬಾಲಕೃಷ್ಣ ಬೇಂದ್ರೆ



**ಬಾಗಲಕೋಟೆ :** ಭಾಷೆ ಗಡಿನಾಡಗಳಲ್ಲಿ ಬದುಕಿನ ಪ್ರಶ್ನೆಯಾಗಿದ್ದು,ಭಾಷೆಸಾಮರಷ್ಯದ ನೆಲೆಯಾಗಬೇಕು ಎಂದು ಧಾರವಾಡದ ಸಂಶೋಧಕರಾದ ಡಾ.ಬಾಲಕೃಷ್ಣ ಬೇಂದ್ರೆ ಹೇಳಿದರು.

ಅವರು ಬಾಗಲಕೋಟೆ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಐಕ್ಯೂಎಸಿ ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿಂದು ನಡೆದ ಅಂತರ ರಾಷ್ಟ್ರೀಯ ಮಾತೃಭಾಷೆ ದಿನ ಅಂಗವಾಗಿ ಸಪ್ತ ಭಾಷೆಗಳ ಸಪ್ತಾಹಿಕ ಸಮಾರೋಪ ಕಾರ್ಯಕ್ರಮದಲ್ಲಿ ಸಮಾರೋಪ ಭಾಷಣ ಮಾಡಿದರು.

ಹಲವು ಪ್ರಾಂತ್ಯಗಳು ಭಾಷಾವಾರು ವಿಭಜನೆಯಾಗಿ, ಮತ್ತೆ ಒಂದುಗೂಡಿದಾಗ ಬಿನ್ನ ಬಿನ್ನ ಸಂಸ್ಕೃತಿ ಹಲವು ಭಾಷಿಕರ ಸಂವಹನದಲ್ಲಿ ಮತ್ತು ಬದುಕಿನ ಅನಿವಾರ್ಯತೆಗಳಲ್ಲಿ ಮಿಶ್ರಣಗೊಂಡಿದ್ದು, ಅದರಲ್ಲೂ ವಿಶೇಷವಾಗಿ ಗಡಿ ಪ್ರದೇಶಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ದ್ವಿಭಾಷಿಕನಾಗಿರುವುದು ಅನಿವಾರ್ಯವಾದ ಸಂಗತಿಯಾಗಿದೆ, ಇದು ಭಾರತೀಯ ವೈವಿಧ್ಯತೆಯ ಸಂಸ್ಕೃತಿಯಲ್ಲಿ ತನ್ನದೆ ಪಾತ್ರವನ್ನು ವಹಿಸಿಕೊಂಡಿದೆ, ಹಾಗಾಗಿ ಪ್ರತಿಯೊಬ್ಬ ಮಾತೃಭಾಷಿಕನಿಗೂ ತನ್ನ ಭಾಷೆಯ ಬಗ್ಗೆ ಪ್ರೀತಿ ವಾತ್ಸಲ್ಯ ಸಹಜವಾದದು, ಆದರೆ ಅದು ಇನ್ನೊಬ್ಬ ಭಾಷಿಕನಿಗೆ ಸಂಘರ್ಷದ ನೆಲೆಯಾಗಬಾರದು ಎಂದರು.

ಪ್ರಸ್ತಾವಿಕವಾಗಿ ಮಾತನಾಡಿದ ಕನ್ನಡ ವಿಭಾಗದ ಮುಖ್ಯಸ್ಥರಾದ ಸಂಗಮೇಶ ಬ್ಯಾಳಿ ಸತತ 7 ದಿನಗಳ ಈ ಸಪ್ತ ಭಾಷೆಗಳ ಸಪ್ತಾಹಿಕ ಕಾರ್ಯಕ್ರಮ ಯಶಸ್ವಿಯಾಗಿದ್ದು, ಈ ಸಪ್ತಾಹ ಮೂಲಕ ಗೊತ್ತಿರದ ಹಲವೂ ಭಾಷೆಗಳ ಪರಿಚಯ ಜ್ಞಾನ ವಿದ್ಯಾರ್ಥಿಗಳಿಗೆ ಲಭಿಸಿದೆ, ಅನ್ಯ ಭಾಷಿಕರಿಗೆ ಕನ್ನಡವನ್ನು ಕಲಿಸುವ ನಿಟ್ಟಿನಲ್ಲಿ ಹಾಗೂ ವಿದ್ಯಾರ್ಥಿನಿಯರು ತಮ್ಮ ಕುಟುಂಬದ ಅನಕ್ಷರಸ್ಥ ಸದಸ್ಯರನ್ನು ದತ್ತು ತೆಗೆದುಕೊಂಡು ಕನ್ನಡ ಕಲಿಸು ಕಾರ್ಯ ಮಾಡಿದ್ದು ಈ ಸಪ್ತ ಭಾಷೆಗಳ ಸಪ್ತಾಹಿಕ ಕಾರ್ಯಕ್ರಮವೆ ಸಾಕ್ಷಿಯಾಗಿದೆ ಎಂದರು

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಎಸ್.ಎನ್.ಪಟ್ಟಣಶೆಟ್ಟಿ ವಿವಿಧ ಭಾಷೆಯ ಸಾಹಿತ್ಯ ಸಂಸ್ಕೃತಿ ಮತ್ತು ಸಂಪ್ರದಾಯ ಸುಮಾರು 7 ದಿನಗಳ ಕಾಲ ಮಕ್ಕಳಿಗೆ ಉಪನ್ಯಾಸ ನಿಡಿಸಿ, ಭಾಷಿಕ ಸಾಮರಸ್ಯತೆಯನ್ನು ವಿದ್ಯಾರ್ಥಿಗಳ ಮನ ತುಂಬಿಸಿದ ಕನ್ನಡ ವಿಭಾಗದ ಕಾರ್ಯ ಶ್ಲಾಘನೀಯ ಅವರಿಗೆ ಅಭಿನಂಧನೆಗಳು, ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯಕ್ಕಾಗಿ ಹಲವು ಭಾಷೆಗಳ ಜ್ಞಾನ ಅವಶ್ಯ ಎಂದರು.


ಕಾರ್ಯಕ್ರಮದಲ್ಲಿ ಡಾ.ಬಿ.ಎಮ್.ಬಡಿಗೇರ, ಸುನೀಲ ನಡಕಟ್ಟಿ, ಜಗದೀಶ ಪತಂಗೆ,ಸಂಗಮೇಶ ಬ್ಯಾಳಿ, ಬಸವರಾಜ ನಾಯಕ್,ಡಾ.ನಂದಾ ಇಟ್ಕರ್, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ರಷ್ಯಾ ದೇಶದಲ್ಲಿ ವೈದ್ಯಕೀಯ ಶಿಕ್ಷಣ ನೀಡುವ ನಿಟ್ಟಿನಲ್ಲಿ ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯೊಂದಿಗೆ ಚೆವಲಿಯರ್ ಗ್ರೂಪ್‌ನ ವಿಶೇಷ ಒಡಂಬಡಿಕೆ

**ಬೆಂಗಳೂರು :** ರಷ್ಯಾ ದೇಶದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ, ದೇಶದ ಪ್ರಮುಖ ಬಹುರಾಷ್ಟ್ರೀಯ ನಿಗಮವಾಗಿರುವ ಚೆವಲಿಯರ್ ಗ್ರೂಪ್ ರಷ್ಯಾ ದೇಶದ ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ಚೆವೆಲಿಯರ್ ಗ್ರೂಪ್ ನ ಸಂಸ್ಥಾಪಕರು ಮತ್ತು ಸಿಇಒ ಡಾ. ಯುವರಾಜ್ ಸಿಂಗ್ ಸೋಲಂಕಿ ತಿಳಿಸಿದರು.

ಇಂದು ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ನಾನು ರಷ್ಯಾದಲ್ಲಿ ಅಧ್ಯಯನ ಮಾಡಿದ್ದು, ನನಗೆ 20 ವರ್ಷಗಳ ಅನುಭವವಿದೆ. ಅಲ್ಲದೇ, ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯ ಗೌರವ ಉಪನ್ಯಾಸಕರು ಮತ್ತು ಸಲಹೆಗಾರ ಆಗಿಯೂ ಕಾರ್ಯನಿರ್ವಹಿಸುತ್ತಿದ್ದೇನೆ. ಈ ವಿವಿ ಕೇವಲ ಎಂಬಿಬಿ–ಎಸ್ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳುವುದಷ್ಟೇ ಅಲ್ಲದೇ ವಿದ್ಯಾರ್ಥಿಗಳಿಗೆ ಸಮಗ್ರ ಬೆಂಬಲ ಮತ್ತು ವೈದ್ಯಕೀಯ ಶಿಕ್ಷಣದ ಸಮಯದಲ್ಲಿ ಸೂಕ್ತ ಮಾರ್ಗದರ್ಶನ ಮಾಡುವ ಕಾರ್ಯದಲ್ಲಿ ನಿರತವಾಗಿದೆ ಎಂದರು.

2013 ? 2023 ರ ದಶಕದಲ್ಲಿ 370 ವಿದ್ಯಾರ್ಥಿಗಳು ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯಿಂದ ಪದವಿ ಪಡೆದಿದ್ದು, 1200 ಕ್ಕೂ ಅಧಿಕ ವಿದ್ಯಾರ್ಥಿಗಳ ಶೈಕ್ಷಣಿಕ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಪೈಕಿ 245 ವಿದ್ಯಾರ್ಥಿಗಳು ಯಶಸ್ವಿಯಾಗಿ ವಿದೇಶಿ ವೈದ್ಯಕೀಯ ಪದವಿ ಪರೀಕ್ಷೆ [ಎಫ್.ಎಂ.ಜಿ.ಇ] ಯಲ್ಲಿ ಉತ್ತೀರ್ಣರಾಗಿದ್ದು,




ತೇರ್ಗಡೆ ಪ್ರಮಾಣ ಶೇ 65% ರಷ್ಟಿದೆ. 65 ಮಂದಿ ವೈದ್ಯರು ಸ್ನಾತಕೋತ್ತರ ಕೋರ್ಸ್ ಗಳಿಗೆ ಪ್ರವೇಶ ಪಡೆದಿದ್ದಾರೆ. ಇದು ಚೆವೆಲಿಯರ್ ಗ್ರೂಪ್ ನೊಂದಿಗೆ ಸಹಭಾಗಿತ್ವ ಹೊಂದಿರುವ ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯ ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಹಿತ ರಕ್ಷಣೆ ಚೆವೆಲಿಯರ್ ಗ್ರೂಪ್ ನ ಪ್ರಧಾನ ಆದ್ಯತೆಯಾಗಿದ್ದು, ವಿದ್ಯಾರ್ಥಿಯ ಪ್ರತಿಯೊಂದು ಶೈಕ್ಷಣಿಕ ಆಯಾಮಗಳನ್ನು ಎಚ್ಚ–ರಿಕೆಯಿಂದ ನಿರ್ವಹಿಸುತ್ತದೆ. ದಾಖಲಾತಿ ಸಲ್ಲಿಕೆಯಿಂದ ಹಿಡಿದು ಪ್ರವೇಶ ಪ್ರಕ್ರಿಯೆಯ ಪ್ರತಿಯೊಂದು ಚಟುವಟಿಕೆಯನ್ನು ಸಮರ್ಥವಾಗಿ ನಿಭಾಯಿಸುತ್ತಿದೆ. ವಸತಿ ನಿಲಯದ ಕೊಠಡಿ ಮಂಜೂರಾತಿ, ವಿವಿಗೆ ಭೇಟಿ, ಹೀಗೆ ಸಣ್ಣ ವಿಷಯಗಳಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ಪೆನ್ಜಾದಲ್ಲಿ ಚೆವೆಲಿಯರ್ ಗ್ರೂಪ್ ಎರಡು ಭಾರತೀಯ ವಸತಿ ನಿಲಯಗಳು ಮತ್ತು ಮೂರು ಹೋಟೆಲ್ ಗಳನ್ನು ನಡೆಸುತ್ತಿದ್ದು, ಮೂರು ಹೊತ್ತು ಭಾರತೀಯ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿದೆ. ವೈದ್ಯಕೀಯ ತುರ್ತುಪರಿಸ್ಥಿತಿ ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಒದಗಿಸುತ್ತಿದೆ ಎಂದು ವಿವರಿಸಿದರು.

ದಕ್ಷಿಣ ಭಾರತದಲ್ಲಿ ಚೆವಲಿಯರ್ ಗ್ರೂಪ್‌ನ ಅಧಿಕೃತ ಪಾಲುದಾರ ಖಖಿ&ಅಖ ಕಗಿಖ ಐಖಿಆ, ನ ವ್ಯವಸ್ಥಾಪಕ ನಿರ್ದೇಶಕರಾದ ಕ್ಷತ್ರಧಾರಿ ಮಂಡಲ್ ಮಾತನಾಡಿ, ಚೆವೆಲಿಯರ್ ಗ್ರೂಪ್ ಮುಂದಿನ ಪೆನ್ಜಾ ಸ್ಟೇಟ್ ಯೂನಿವರ್ಸಿಟಿಯ ಪರೀಕ್ಷೆಗೆ ಭಾರತೀಯ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು 10 ಮಂದಿ ಖ್ಯಾತ ಬೋಧಕ ಸಿಬ್ಬಂದಿಯನ್ನು ಸಹ ನಿಯೋಜಿಸಿದೆ. ಇದ–ರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆ ಹೆಚ್ಚಾಗುವ ಜೊತೆಗೆ ತಮ್ಮ ಅಧ್ಯಯನದಲ್ಲಿ ವಿಶೇಷತೆ ಸಾಧಿಸಲು ಸಾಧ್ಯವಾಗಲಿದೆ. ಚೆವೆಲಿಯರ್ ಗ್ರೂಪ್ ಇದೀಗ ವಡೋದರದ ಪರ್ಲ್ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ್ದು, ಪೆನ್ಜಾ ಸ್ಟೇಟ್ ಯೂನಿರ್ವಸಿಟಿಯ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಇಲ್ಲಿ ನಡೆಸಲಾಗುತ್ತಿದೆ. ವೈದ್ಯಕೀಯ ಶಿಕ್ಷಣದ ಭವಿಷ್ಯದ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸನ್ನದ್ಧರಾಗಲು ನೆರವಾಗುತ್ತಿದೆ ಎಂದರು.

# ಬಿಡಾಡಿ ದನಗಳ ಮಾಲಿಕರ ಗಮನಕ್ಕೆ

**ಬಾಗಲಕೋಟೆ :** ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಬಿಡಾಡಿ ದನಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಹಗಲು ವೇಳೆ ರಸ್ತೆಯಲ್ಲಿ ಬಿಡಾಡಿ ದನಗಳು ಮಲಗುತ್ತಿರುವುದ-ರಿಂದ ಸಾರ್ವಜನಿಕರ ಮತ್ತು ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಈ ಬಗ್ಗೆ ಬಿಡಾಡಿ ದನಗಳ ಮಾಲಿಕರಿಗೆ ಗಮನಕ್ಕೆ ತಂದರು ಕರೆದುಕೊಂಡು ಹೋಗುತ್ತಿಲ್ಲ. ಇನ್ನು ಮುಂದೆ ಬಿಡಾಡಿ ದನಗಳು ರಸ್ತೆಯ ಮೇಲೆ ಕಂಡಲ್ಲಿ ಅವುಗಳನ್ನು ಹಿಡಿದುಕೊಂಡು ಶಿವಯೋಗ ಮಂದಿರ ಬಾದಾಮಿ, ಪಾಂಜರ ಪೋಳ ಬಾಗಲಕೋಟೆಗೆ ಕಳುಹಿಸಲಾಗುತ್ತದೆ. ಸದರಿ ದನಗಳ ಸಾಗಾಣಿಕೆ ವೆಚ್ಚ ಮತ್ತು ದಂಡ 250 ರೂ.ಗಳನ್ನು ದನಗಳ ಮಾಲಿಕರಿಂದ ಪುರಸಭೆ ಕಾಯ್ದೆಯಡಿ ವಸೂಲಿ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆನೆಗೊಂದಿ ಉತ್ಸವಕ್ಕೆ ಸಹಕರಿಸಿ: ಶಿವರಾಜ ತಂಗಡಗಿ



**ಕೊಪ್ಪಳ :** ಮಾರ್ಚ 11 ಮತ್ತು ಮಾರ್ಚ 12ರಂದು ನಿಗದಿಪಡಿಸಿದ ಐತಿಹಾಸಿಕ ಆನೆಗೊಂದಿ ಉತ್ಸವದ ಸಿದ್ಧತೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚಿಸಲಾಗಿದ್ದು ಸಾರ್ವಜನಿಕರು ಸಹ ಉತ್ಸವದ ಯಶಸ್ಸಿಗೆ ಸಹಕರಿಸಬೇಕು ಎಂದು ಸಚಿವರಾದ ಶಿವರಾಜ ತಂಗಡಗಿ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಕನಕಗಿರಿ ಉತ್ಸವದ ಸಿದ್ಧತೆ ನಡೆಸಿದ 18 ತಂಡಗಳೇ ಇಲ್ಲಿ ಕೂಡ ಕಾರ್ಯನಿರ್ವಹಿಸಲಿವೆ. ಕನಕಗಿರಿ ಉತ್ಸವವನ್ನು ಯಶಸ್ವಿಗೊಳಿಸಿದಂತೆ ಜನ ಮೆಚ್ಚುವ ಹಾಗೆ ಆನೆಗೊಂದಿ ಉತ್ಸವವನ್ನು ಸಹ ನಡೆಸಲಾಗುವುದು. ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಜನಾರ್ಧನ ರೆಡ್ಡಿ, ಜಿಪಂ ಸಿಇಓ ರಾಹುಲ್ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿ ಸಾವಿತ್ರಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಸೇರಿದಂತೆ ಇತರರು ಇದ್ದರು.

# ದತ್ತು ಮಾನೆ ನಿಧನ



**ಮೂಡಲಗಿ :** ಸ್ಥಳೀಯ ವಿದ್ಯಾನಗರದ ಗೊಂಧಳಿ ಸಮಾಜದ ಹಿರಿಯರಾದ ದತ್ತು ರಾಮಚಂದ್ರ ಮಾನೆ (75) ಮಂಗಳವಾರ ನಿಧನರಾದರು. ಮೃತರು ಭೂ ಸೇನೆಯ ಅಸ್ಸಾಂ ರೈಫಲ್ಸ್‌ನಲ್ಲಿ ಜವಾನರಾದ ಪುತ್ರ ಶಂಕರ ಮಾನೆ ಸಹಿತ ತಮ್ಮಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನಗಲಿದ್ದಾರೆ.

# ಶಾಲೆಗೆ ಎಸ್‌ಡಿಎಮ್‌ಸಿ ನೇಮಕ



**ಮೂಡಲಗಿ :** ಸೋಮವಾರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶ್ರೀ ಗೇದಲಮ್ಮಾದೇವಿ ತೋಟ ಕ್ಲಸ್ಟರ್ ಸುಣಧೋಳಿ ವಲಯ ಮೂಡಲಗಿಯಲ್ಲಿ, ನೂತನ ಎಸ್.ಡಿ.ಎಮ್.ಸಿ ಅಧ್ಯಕ್ಷ ವಿಜಯಕುಮಾರ್ ಕಂಬಾರ, ಉಪಾಧ್ಯಕ್ಷೆ ಚಂದ್ರಿಕಾ ಮಾವಿನಂಡಿ ಹಾಗೂ ಸದಸ್ಯರಾದ ಬಸಪ್ಪಾ ಮಂಗಿ,ಮಾನಿಂಗಯ್ಯಾಮ ಠದ,ಧರೆಪ್ಪಾ ದೊಡಮನಿ,ಹಣಮಂತ ಪೂಜೇರಿ, ಕೃಷ್ಣಪಾ ವಾಲಿಕರ,ನಾಗಪ್ಪ ಹುಣಶ್ಯಾಳ,ಸಿದ್ಧಪ್ಪ ಮನ್ನಾಪೂರ,ಮಹಾದೇವ ಜಗ್ಗಿನ್ನವರ, ಸುಜಾತಾ ಯಡ್ರಾಂವಿ, ರೇಣುಕಾ ಬಿರಾಣಿ, ಸರಸ್ವತಿ ಬಿ.ಪಾಟೀಲ, ಲಕ್ಷ್ಮೀ ಡೋಣಿ, ಕಮಲಾ ಗಾಡವಿ, ಲಕ್ಷ್ಮೀ ತೋಗರಿ, ಲಕ್ಷ್ಮೀ ಬೀರನ್ನವರ, ಇವರಿಗೆ ಸ್ವಾಗತ ಹಾಗೂ ಅಭಿನಂದನೆ ಹಾಗೂ ನಿಕಟಪೂರ್ವ ಅಧ್ಯಕ್ಷರು ಪದಾಧಿಕಾರಿಗಳಿಗೆ ಕೃತಜ್ಞತೆ, ಅಭಿನಂದನೆ ಸಮಾರಂಭವನ್ನು ಏರ್ಪಡಿಸಲಾಗಿತ್ತು,

ಈ ಸಂದರ್ಭದಲ್ಲಿ ತಿಗಡಿ ಗ್ರಾಮ ಪಂಚಾಯಿತಿ ಸದಸ್ಯ ಮಂಜುಳಾ ಪೂಜೇರಿ, ಸುಣಧೋಳಿಯ ಸಿ.ಆರ್.ಪಿ ಗಳಾದ ಎಚ್.ಎನ್.ಬೆಳಗಲಿ, ಮಸಗುಪ್ಪಿ ತೋಟದ ಶಾಲೆಯ ಪ್ರಧಾನ ಗುರು ಎಸ್.ಎಸ್. ಮಾವಿನಂಡಿ, ಶಾಲೆಯ ಪ್ರಧಾನ ಗುರು ಎಚ್. ಎಲ್.ಕುರಬೇಟ, ಶಿಕ್ಷಕರಾದ ಗೋವಿಂದ ಸಣ್ಣಕ್ಕಿ, ಆರ್.ಎಂ.ಹೊವನ್ನವರ, ಎಸ್.ಆರ್.ಪಾಟೀಲ, ಊರಿನ ಗಣ್ಯರು,ಹಿರಿಯರು,ಶಿಕ್ಷಣ ಪ್ರೇಮಿಗಳು, ಯುವಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದರು, ಶಾಲೆಯ ಪ್ರಧಾನ ಗುರು ಎಚ್.ಎಲ್.ಕುರಬೇಟ ಸ್ವಾಗತಿಸಿ. ವಂದಿದರು.

# ಕೃಷಿ, ತೋಟಗಾರಿಕೆ, ವಿಜ್ಞಾನಗಳ ವಿವಿ: 10ನೇ ಅಂತರ್ ಮಹಾವಿದ್ಯಾಲಯಗಳ ಕ್ರೀಡಾ ಹಬ್ಬ



**ಶಿವಮೊಗ್ಗ :** ಹಿರಿಯೂರುನಲ್ಲಿ ಆಯೋಜಿಸಿದ್ದ 10ನೇ ಅಂತರ ಮಹಾವಿದ್ಯಾಲಯಗಳ ಬಾಸ್ಕೆಟ್‌ಬಾಲ್ ಮತ್ತು ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಡಾ. ಆರ್.ಸಿ ಜಗದೀಶ್ ಉದ್ಘಾಟಿಸಿದರು.

ರಾಜ್ಯದಲ್ಲಿರುವ ವಿವಿಧ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆಗಳ ವಿಜ್ಞಾನಗಳ ವಿಶ್ವವಿದ್ಯಾಲಯ ಇರುವಕ್ಕಿ ಶಿವಮೊಗ್ಗ ಹಾಗೂ ಅರಣ್ಯ ಮಹಾವಿದ್ಯಾಲಯ ಪೊಣ್ಣಪೇಟೆ, ತೋಟಗಾರಿಕೆ ಮಹಾವಿದ್ಯಾಲಯ ಮೂಡಿಗೆರೆ, ತೋಟಗಾರಿಕೆ ಮಹಾವಿದ್ಯಾಲಯ ಹಿರಿಯೂರು, ಕೃಷಿ ಮಹಾವಿದ್ಯಾಲಯ ನವಿಲೇ ಶಿವಮೊಗ್ಗ, ಕೃಷಿ ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಇರುವಕ್ಕಿ, ಎಲ್ಲಾ ಮಹಾವಿದ್ಯಾಲಯಗಳಿಂದ 2023–24 ನೇ ಸಾಲಿನ ಕ್ರೀಡಾಕೂಟ ನಡೆಯಿತು.

ಇದೇ ಸಾಲಿನ ಕ್ರೀಡಾಕೂಟದ ಒಟ್ಟಾರೆ ಶ್ರೇಷ್ಠ ಪ್ರದರ್ಶನವನ್ನು ನೀಡಿ ಚಾಂಪಿಯನ್ ಶಿಪ್ ಸಮಗ್ರಪ್ರಶಸ್ತಿಗಳ ಪಟ್ಟವನ್ನು ಕೃಷಿ ಮಹಾವಿದ್ಯಾಲಯ ನವಿಲೇ ಶಿವಮೊಗ್ಗ ಪಡೆದುಕೊಂಡಿ-ದ್ದು ವಿಶೇಷವಾಗಿದೆ.

ಕ್ರೀಡಾ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿ ಸದಸ್ಯರಾದ ಡಾ. ಶ್ರೀಧರ್, ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರಾದ ಡಾ. ಶಿವಶಂಕರ್ ಮತ್ತು ಕೃಷಿ ಮಹಾವಿದ್ಯಾಲಯದ ಆವರಣದ ಮುಖ್ಯಸ್ಥರಾದ ಡಾ. ಗಣೇಶ್ ನಾಯಕ, ತೋಟಗಾರಿಕೆ ಆವರಣದ ಮುಖ್ಯಸ್ಥರಾದ ಡಾ. ಮಂಜಪ್ಪ, ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ್, ಡಾ. ಯಲ್ಲಪ್ಪ ಎಂ, ಡಾ. ಈಶ್ವರ್, ಡಾ. ನಿಂಗರಾಜ್, ಡಾ. ವಿಶ್ವನಾಥ್ ಮತ್ತು ಕ್ರೀಡಾ ವಿದ್ಯಾರ್ಥಿಗಳು ಭಾಗವಹಿಸಿದರು.

# ವಿಠ್ಠಲರುಕ್ಮಿಣಿ ಮೂರ್ತಿಗಳ ಪ್ರತಿಷ್ಠಾಪನೆ





**ಮಹಾಲಿಂಗಪುರ :** ಸ್ಥಳೀಯ ಬುದ್ನಿಪಿಡಿ ಬಡಾವಣೆಯ ಶತಮಾನಗಳ ಐತಿಹಾಸಿಕ ವಿಠ್ಠಲ ರುಕ್ಮಿಣಿ ಮಂದಿರದಲ್ಲಿ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಇತ್ತಿಚಿಗೆ ಜರುಗಿತು.

ಮೂರ್ತಿ ಪ್ರತಿಷ್ಟಾಪನೆಯ ನಿಮಿತ್ಯ ಬೆಳಿಗ್ಗೆ 5 ರಿಂದ ಹೋಮ, ಹವನ, ಆರತಿಯೊಂದಿಗೆ ಫಂಡರಾಪುರದ ಶಿಲ್ಪಿ ನಿತಿನ್ ನಿರ್ಮಿಸಿರುವ 3.3 ಅಡಿ ಎತ್ತರದ ವಿಠ್ಠಲ ಮೂರ್ತಿ, 2.11 ಅಡಿ ಎತ್ತರದ ರುಕ್ಮಿಣಿ ಹಾಗೂ ಆಂಜನೇಯ, ಜ್ಞಾನದೇವ, ತುಕಾರಾಮರ ಸುಂದರ ಮೂರ್ತಿಗಳಿಗೆ ಸಾವಳಗಿಯ ಸಂತ ರಾಜು ಜೋಶಿ ಅವರು ಪ್ರಾಣ ಪ್ರತಿಷ್ಠಾಪನೆ ಮಾಡಿದರು. ನಂತರ ಕಾಲ ವಿಠ್ಠಲ ರುಕ್ಮಿಣಿಗೆ ವಡವೆ, ವಸ್ತ್ರ, ಹೂವಿನಹಾರ ಅಲಂಕಾರ ಮಾಡಿ ಪೂಜಿಸಲಾಯಿತು. ಸಂತರು ಮತ್ತು ಮತ್ತೈದೆಯರಿಂದ ಮಹಾಮಂಗಳಾರತಿ ನಂತರ ಮಹಾಪ್ರಸಾದ ಜರುಗಿತು.

ದೇವಸ್ಥಾನದ ಜೀರ್ಣೋದ್ಧಾರ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ಕೆ ನಿರಂತರ ಶ್ರಮಿಸಿದ ಸಂತ ಸತ್ಯಪ್ಪ ಚಿಕ್ಕೂರ, ಸಂತ ಮೌನೇಶ ಬಡಿಗೇರ, ಅರ್ಚಕಿ ಬೇಬವ್ವ ರಾಮಚಂದ್ರ ಯಾದವಾಡ, ಗೌಡಪ್ಪಗೌಡ ಪಾಟೀಲ, ವಿಠ್ಠಲಗೌಡ ಬಿ.ಪಾಟೀಲ, ಸದಾಶಿವ ಶೆಗುಣಸಿ, ಮಲ್ಲಪ್ಪ ಅಂಬಣ್ಣಗೋಳ, ಕುಮಾರ ಪವಾರ, ರಾಜಶೇಖರ ಮಾಯಪ್ಪಗೋಳ, ಶಿವಯ್ಯ ಮಠಪತಿ ಇವರನ್ನು ಶ್ರೀಮಂತ ಒಂಟಗೋಡಿ ನೇತೃತ್ವದಲ್ಲಿ ಸನ್ಮಾನಿಸಿಸಲಾಯಿತು.

ಮೂರ್ತಿ ಪ್ರತಿಷ್ಠಾಪನೆಯ ಮುನ್ನಾದಿನ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿ ಹಾಗೂ ಫಂಡರಪುರ ಶಿವುರಕರ ಶಾಖೆಯ ಕೃಷ್ಣ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನೂತನ ಮೂರ್ತಿಗಳ ಪೂಜೆ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ಕುಂಭಮೇಳ ಮತ್ತು ಕೀರ್ತನೆ, ಭಜನೆ, ಜಾಗರಣೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಗಳು ಜರುಗಿದವು.

# ಲೋಕಸಭೆ ಚುನಾವಣೆ ಅಧಿಕಾರಿಗಳಿಂದ ಮತಗಟ್ಟೆಗಳ ಪರಿಶೀಲನೆ



**ಮಹಾಲಿಂಗಪುರ :** ಲೋಕಸಭೆ ಚುನಾವಣೆಯ ಹಿನ್ನಲೆಯಲ್ಲಿ ಮಂಗಳವಾರ ಪಟ್ಟಣದ ವ್ಯಾಪ್ತಿಯಲ್ಲಿರುವ ಮತಗಟ್ಟೆಗಳಿಗೆ ಪುರಸಭೆ ಅಧಿಕಾರಿಗಳು ಮತ್ತು ಹೆಸ್ಕಾಂ ಸಿಬ್ಬಂದಿ ಭೇಟಿನೀಡಿ ಪರಿಶೀಲಿಸಿದರು.

ಪುರಸಭೆಯ ಮುಖ್ಯಾಧಿಕಾರಿ, ಚುನಾವಣೆಯ ಮಹಾಲಿಂಗಪುರ ನೊಡಲ್ ಅಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಮಹಾಲಿಂಗಪುರ ಪಟ್ಟಣದ ವ್ಯಾಪ್ತಿಯಲ್ಲಿ ಒಟ್ಟು 34 ಮತಗಟ್ಟೆಗಳಿದ್ದು, ಎಲ್ಲಾ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. 2–3 ಮತಗಟ್ಟೆಗಳಲ್ಲಿ ಅವಶ್ಯವಿರುವ ವಿದ್ಯುತ್ ದೀಪ ಮತ್ತು ರ್‍ಯಾಂಪ್ ಅಳವಡಿಸಲಾಗುವದು, ಇನ್ನುಳಿದ ಎಲ್ಲಾ ಮತಗಟ್ಟೆಗಳಲ್ಲಿ ಮತದಾನ ವ್ಯವಸ್ಥೆಗೆ ಯಾವುದೇ ತೊಂದರೆಯಿಲ್ಲ ಎಂದರು.

ಪುರಸಭೆಯ ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ, ಎಂ.ಎಂ.ಮೂಗಳಖೋಡ, ಸಿ.ಎಸ್.ಮಠಪತಿ, ಹೆಸ್ಕಾಂನ ಹಣಮಂತ ವಗ್ಗರ ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು ಇದ್ದರು.

# ಮಾನವ ಮಾನವನನ್ನು ಗೌರವಿಸುವುದೇ ಮಾನವ ಹಕ್ಕು: ನ್ಯಾ. ಅಮರಣ್ಣವರ




**ಧಾರವಾಡ :** ಮಾನವ ಮಾನವನನ್ನು ಗೌರವಿಸುವುದೇ ಮಾನವ ಹಕ್ಕುಗಳು, ನಾನು ಮಾತಾಡಿದರೆ ಇನ್ನೊಬ್ಬರಿಗೆ ನೋವಾಗದಂತಿರಬೇಕು ಎಂಬುದು ವಚನಕಾರರು ಹೇಳುವ ಮೂಲಕ, ಮಾನವ ಹಕ್ಕುಗಳನ್ನು ವಚನಕಾರರು ವಿಭನ್ನರೀತಿಯಲ್ಲಿ ತಮ್ಮ ವಚನಗಳಲ್ಲಿ ಪ್ರತಿಪಾದಿಸಿರುವರು ಎಂದು ಕರ್ನಾಟಕ ಉಚ್ಚನ್ಯಾಯಾಲದ ನ್ಯಾಯಮೂರ್ತಿ ಶಿವಶಂಕರ ಬಿ. ಅಮರಣ್ಣವರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ದಿವಂಗತ ಪ್ರೊ?ರ. ರಾಮಚಂದ್ರ ಪಾಟೀಲ ದತ್ತಿ ಅಂಗವಾಗಿಆಯೋಜಿಸಿದ್ದ 'ವಚನಗಳು ಮತ್ತು ಮಾನವ ಹಕ್ಕುಗಳು' ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ, ಶರಣರುಅಸ್ಪ್ರಶ್ಯತೆ ಬಗ್ಗೆ, ಲಿಂಗ ಸಮಾನತೆ ಬಗ್ಗೆ ಹೀಗೆ ಮಾನವ ಹಕ್ಕುಗಳನ್ನೆಲ್ಲವನ್ನು ತಮ್ಮ ವಚನಗಳಲ್ಲಿ ಹೇಳುವ ಮೂಲಕ ಬಹುತೇಕ ವಚನಕಾರರ ಆಶಯಗಳೆಲ್ಲ ಸಂವಿಧಾನದಲ್ಲಿಅಡಕವಾಗಿವೆ. ಹಿಂಸೆ ಎಂದರೆ ಕೇವಲ ದೈಹಿಕವಾಗಿಅಲ್ಲ ಮಾನಸಿಕವಾಗಿಯೂ ಘಾಸಿ ಮಾಡುವುದೂ ಹಿಂಸೆಯಾಗುತ್ತದೆ. ನಮ್ಮ ನಡೆ ನುಡಿ ಸ್ಪಟಿ-ಕದ ಸಲಾಕೆಯಂತಿರಬೇಕು ಎನ್ನುವ ಮೂಲಕ ಇನ್ನೊಬ್ಬರ ಮಾನನಷ್ಟವಾಗದಂತೆ ನಡೆದುಕೊಳ್ಳಬೇಕು ಎಂದಿರುವರು. ವಚನಕಾರರು ಕೇವಲ ವಚನಗಳನ್ನು ಬರೆಯಲಿಲ್ಲ ಬರೆದಂತೆ ಬದುಕಿದರು, ಬದುಕಿದಂತೆ ಬರೆದರು.ಜಗತ್ತಿಗೆ ಮಾನವೀತೆಯ ಶ್ರೇಷ್ಠತೆಯ ದಾರಿತೋರಿಸಿದರು.

ಸಾವಿರಾರು ಕಾನೂನುಗಳು ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಬಂದಿವೆ. ಅವೆಲ್ಲವೂ ವಚನಗಳಲ್ಲಿ ಅಡಕವಾದ ಅಂಶಗಳನ್ನೇ ಒಳಗೊಂಡಿವೆ.ಭಾರತೀಯದಂಡ ಸಂಹಿತೆಯಲ್ಲಿ ಸೂಚಿಸುವ ಅಂಶಗಳನ್ನು ಬಸವಣ್ಣನವರ ಕಳಬೇಡ, ಕೊಲಬೇಡವಚನದಲ್ಲಿ ಸಪ್ತ ಸೂತ್ರಗಳನ್ನು ನೀಡುವುದರೊಂದಿಗೆ ಸ್ಪಷ್ಟವಾಗಿ ಅಪರಾಧಗಳನ್ನು ತಡೆಗಟ್ಟುವ ಮಾರ್ಗವನ್ನು ಹೇಳಿಕೊಟ್ಟಿದ್ದಾರೆ.ಶರಣೆ ಕಾಳವ್ವ ಆಹಾರದ ಭೇಧಭಾವ ಸಲ್ಲದುಎಂದುಆಹಾರದ ಬಗ್ಗೆ ಯಾರಮೇಲೂಯಾರದೂ ನಿಬರ್ಂಧಇರಬಾರದುಎಂದು ಪ್ರತಿಪಾದಿಸಿರುವಳು.

ಮಾನವ ಹಕ್ಕುಗಳನ್ನು ಜಾರಿಗೊಳಿಸಿರುವುದರಿಂದ ದೇಶದಲ್ಲಿ ಮಾನವನಜೀವನ ಮಟ್ಟ ಸುಧಾರಿಸಿದೆ. ಇದಕ್ಕೆಕಾರಣ ವಚನಗಳ ಪ್ರಭಾವವೂಅಡಗಿದೆಎಂದ ನ್ಯಾಯಮೂರ್ತಿಅಮರಣ್ಣವರ, ಇಂದುಜಗತ್ತಿನಲ್ಲಿ ಭಯೋತ್ಪಾದನೆ, ಅನಾಚಾರ, ಬ್ರಷ್ಟಾಚಾರ ಮಿತಿ ಮೀರಿದೆ. ಇವುಗಳು ನಿಯಂತ್ರಣಕ್ಕೆ ಬರಬೇಕೆಂದರೆ ವಚನಗಳನ್ನು ಪಾಲಿಸಿದರೆ ಸಾಕು ಈ ಪಿಡುಗುಗಳನ್ನು ಇಲ್ಲದಾಗಿಸಬಹುದು.ಸಕಲ ಜೀವಾತ್ಮಕ್ಕೆ ಲೇಸನ್ನು ವಚನಕಾರರು ಬಯಸಿದರು. ನಮ್ಮ ಸಂವಿಧಾನವೂಇದನ್ನೇ ಪ್ರತಿಪಾದಿಸುತ್ತಿದೆ.ಮಹಿಳೆಯರ ಮೇಲಿನ ದೌರ್ಜನೆಗಳನ್ನು ತಡೆಯಲು ಬರೀ ಕಾನೂನಿನಿಂದ ಸಾಧ್ಯವಿಲ್ಲ. ಇದೊರಟ್ಟಿಗೆ ಸಮಾಜದಲ್ಲಿ ನೈತಿಕತೆ ಮಟ್ಟ ಹೆಚ್ಚಾದಾಗ ಮಾತ್ರ ಮಹಿಳೆಯರ ದೌರ್ಜನ್ಯ ನಿಲ್ಲಿಸಲು ಸಾಧ್ಯವಾಗುವುದು ಬಸವಣ್ಣನವರು ಶ್ರಮಿಕರಲ್ಲಿ ಸ್ವಾಭಿಮಾನತುಂಬಿದರು. ಮೌಢ್ಯವನ್ನು ಖಂಡಿಸಿದರು, ಹೆಣ್ಣಿನಘನತೆಯನ್ನುಎತ್ತಿ ಹಿಡಿದರು.ದೀನದಲಿತರನ್ನು ಮೇಲೆಕ್ಕೆತ್ತಿದರು.

ಇಂದು ನಾವು ವಚನಗಳನ್ನು ಪಾಲಿಸುತ್ತೇವೆಎಂದರೆ ಸಂವಿಧಾನವನ್ನು ಪಾಲಿಸಿದಂತೆ, ಇಂದು ವಚನಗಳನ್ನು ರಕ್ಷಿಸುತ್ತೇವೆಎಂದರೆ ಸಂವಿಧಾನವನ್ನು ರಕ್ಷಿಸಿದಂತೆ, ಇಂದು ವಚನಗಳನ್ನು ಎತ್ತಿ ಹಿಡಿಯುತ್ತೇವೆಎಂದರೆ ಸಂವಿಧಾನವನ್ನುಎತ್ತಿ ಹಿಡಿದಂತೆ. ವಚನಗಳಿಲ್ಲದೇ ಸಂವಿಧಾನವಿಲ್ಲ, ಸಂವಿಧಾನವಿಲ್ಲದೆ ವಚನಗಳಿಲ್ಲ, ಅದಕ್ಕಾಗಿ ನಾವೆಲ್ಲರೂ ಸಂವಿಧಾನವನ್ನುಗೌರವಿಸೋಣ ವಚನಗಳಂತೆ ನಡೆದುಕೊಳ್ಳೋಣ ಎಂದು ಶಿವಶಂಕರ ಬಿ.ಅಮರಣ್ಣವರ ಹೇಳಿದರು.

ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದಕರ್ನಾಟಕಉಚ್ಚನ್ಯಾಯಾಲಯಧಾರವಾಡ ಪೀಠದ ವಿಶ್ರಾಂತ ಹೆಚ್ಚುವರಿ ಸಹಾಯಕ ಸಾಲಿಸಿಟರ್ ಜನರಲ್ ಕೆ.ಬಿ.ನಾವಲಗಿಮಠ, ವಕೀಲರು ಮತ್ತು ನ್ಯಾಯಾಧೀಶರು ಹೇಗಿರಬೇಕೆಂದರೆ ಈ ಸೃಷ್ಟಿಯಲ್ಲಿಏನೆಲ್ಲ ಮಾಹಿತಿ, ಜ್ಞಾನ ಇದೆಯಲ್ಲಅದರಅರಿವುಇರಬೇಕು, ಅಂದಾಗಲೇ ನ್ಯಾಯ ಒದಗಿಸಿಕೊಡಲು ಸಾಧ್ಯ. ಅಂಥ ತಿಳುವಳಿಕೆಯನ್ನು ಶಿವಲಿಂಗ ಅಮರಣ್ಣವರ ಹೊಂದಿದ್ದಾರೆ.ತಂದೆ ನನಗೇನು ಮಾಡಿದ್ದಾನೆಎಂದು ಕೇಳುವ ಇಂದಿನ ಯುವಜನಾಂಗಕ್ಕೆ ಮಾದರೀಯವಾಗಿಡಾ. ಅಶೋಕ ಪಾಟೀಲ ತಮ್ಮತಂದೆಯನ್ನುಅರ್ಥಪೂರ್ಣವಾಗಿ ಸ್ಮರಿಸಿಕೊಳ್ಳುತ್ತಿದ್ದಾರೆ.ಇಂದಿನ ಪೀಳಿಗೆಗೆ ಮಾದರೀಯವಾಗಿದ್ದಾರೆ ಎಂದರು.

ರಾಂಚಿ ಕಾನೂನಿನ ಅಧ್ಯಯನ ಮತ್ತು ಸಂಶೋದ ನಾರಾಷ್ಟ್ರೀಯವಿಶ್ವವಿದ್ಯಾಲಯದ ಕುಲಪತಿ ಪ್ರೋ. ಅಶೋಕ ಪಾಟೀಲ, ಶಾರದಾ ಪಾಟೀಲ ದತ್ತಿ ದಾನಿಗಳ ಪರವಾಗಿ ಮಾತನಾಡಿದರು.ಮಧುಮತಿ ಸಣಕಲ್ಲ ವಚನ ಹೇಳುವ ಮೂಲಕ ಪ್ರಾರ್ಥನೆ ನಡೆಸಿಕೊಟ್ಟರು.ಸಂಘದಕೋಶಾಧ್ಯಕ್ಷ ಸತೀಶತುರಮರಿ ಸ್ವಾಗತಿಸಿದರು, ಗುರು ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.ಶಂಕರ ಹಲಗತ್ತಿಕಾರ್ಯಕ್ರಮ ನಿರೂಪಿಸಿದರು.ಶಿವಾನಂದ ಭಾವಿಕಟ್ಟಿ ವಂದಿಸಿದರು.

ವೇದಿಕೆ ಮೇಲೆ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಉಪಸ್ಥಿತರಿದ್ದರು.

ವೀರಣ್ಣಒಡ್ಡೀನ, ಡಾ.ಧನವಂತ ಹಾಜವಗೋಳ, ಡಾ. ಜಿನದತ್ತ ಹಡಗಲಿ, ಪ್ರಮಿಳಾ ಜಕ್ಕಣ್ಣವರ, ಸದಾನಂದ ಮುಂದಿನಮನಿ, ರಾಜು ನಾವಲಗಿಮಠ, ಮಹಾಂತೇಶನರೇಗಲ್ಲ, ಶಿವಾನಂದ ಹೂಗಾರ, ನಿಂಗಣ್ಣಕುಂಟಿ, ಮುದಿಗೌಡರ ಹಾಗೂ ರಾಮಚಂದ್ರ ಪಾಟೀಲ ಪರಿವಾರ ಭಾಗವಹಿಸಿದ್ದರು.

# ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಲು ಕರೆ



**ಮುನವಳ್ಳಿ :** ಪಾಲಕರು ತಮ್ಮ ಮಕ್ಕಳ ಕಲಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬೆಳೆಸಬೇಕು ಅಂದಾಗ ಮಾತ್ರ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲು ಮತ್ತು ಸುಸಂಸ್ಕೃತ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಸವದತ್ತಿ ತಾಲೂಕಾ ಕ ಸಾ ಪ ಅಧ್ಯಕ್ಷರು ಹಾಗೂ ಕೆ ಪಿ ಎಸ್ ಪ್ರಾಚಾರ್ಯರಾದ ವೈ ಎಂ ಯಾಕೊಳ್ಳಿ ಹೇಳಿದರು.

ಯಕ್ಕುಂಡಿಯ ಕರ್ನಾಟಕ ಪಬ್ಲಿಕ್ ಸ್ಕೂಲನ ಪ್ರಾಥಮಿಕ ವಿಭಾಗದ ಸನ್ 2023–2024 ನೇ ಸಾಲಿನ 7 ನೇ ತರಗತಿವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಮತ್ತು ವಾರ್ಷಿಕ ಸ್ನೇಹಸಮ್ಮೇಳನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಶಿಕ್ಷಣ ಜಗತ್ತಿನಲ್ಲಿ ನಮ್ಮೆಲ್ಲರನ್ನು ದೊಡ್ಡವರನ್ನಾಗಿ ಮಾಡುತ್ತದೆ ಎಂದು ಮಕ್ಕಳಿಗೆ ಕಿವಿಮಾತನ್ನು ಹೇಳಿದರು. ಶ್ರಮಪಟ್ಟು ಓದುವುದನ್ನ ರೂಡಿಮಾಡಿಕೊಳ್ಳಲು ಕರೆನೀಡಿದರು,ಪ್ರಾಥಮಿಕ ವಿಭಾಗದ ಶಿಕ್ಷಕರು ವಿದ್ಯಾರ್ಥಿಗಳನ್ನು ಒಳ್ಳೆಯ ರೀತಿಯಲ್ಲಿ ಬೆಳಸಿರುವುದನ್ನು ಕಂಡು ಸಂತೋಷ ವ್ಯಕ್ತಪಡಿಸಿದರು.

ಮುಖ್ಯೋಪಾದ್ಯರಾದ ವ್ವಿ ಎಸ್ ಗದ್ದಿಗೌಡರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ವಿದ್ಯಾರ್ಥಿಗಳು ಸಮಯ ನಿರ್ವಹಣೆ ಮತ್ತು ಶಿಸ್ತನ್ನು ಹಾಗೂ ಸದ್ಗುಣಗಳನ್ನು ಅಳವಡಿಸಿಕೊಂಡಾಗ ಮಾತ್ರ ಯಶಸ್ವಿಯಾಗಿ ಗುರಿ ಸಾಧಿಸಲು ಸಾಧ್ಯ ಮತ್ತು ನಿಮ್ಮ ಕನಸುಗಳನ್ನು ನಂಬಿಕೆಯಾಗಿ ಇಟ್ಟುಕೊಂಡು ನನಸು ಮಾಡಿಕೊಳ್ಳಲು ಪ್ರಯತ್ನಿಸಿ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ಪಿ ಪಿ ನಾಗಪ್ಪಗೋಳ ಮಾತನಾಡಿದರು.

ಮುಖ್ಯಅತಿಥಿಗಳಾಗಿ ಧೂಪದಾಳ ಶಾಲೆಯ ಮುಖ್ಯೋಪಾದ್ಯರಾದ ಎಸ್ ವಾಯ್ ಬಡ್ಲಿ, ಉರ್ದುಶಾಲೆಯ ಶಂಕರ ಲಮಾಣಿ, ಎಸ್‌ಡಿಎಮ್‌ಸಿ ಸದಸ್ಯರಾದ ಚನ್ನಪ್ಪ ಹೊಂಗಲ, ದಿಲಾವರಸಾಬ ಭಾರಿಗಿಡದ, ಶಾಲೆಯ ಗುರುಗಳಾದ ಕೆ. ಕೆ. ಲಮಾಣಿ, ಎನ್. ಸಿ. ಗೋಣಿ, ಪಿ. ಎಸ್. ವಿವೇಕಿ, ಪಿ. ವ್ಹಿ. ಹತ್ತಿಕಟಗಿ, ಎಮ್. ಐ. ಮುಲ್ಲಾನವರ, ಆರ್. ಎಚ್. ಈಳಗೇರ ಮುಂತಾದ ಗುರುವೃಂದ ಮತ್ತು ಗ್ರಾಮಸ್ಥರು, ಶಿಕ್ಷಣ ಪ್ರೇಮಿಗಳು ಉಪಸ್ಥಿತರಿದ್ದರು.

ಪಾಠದಲ್ಲಿ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ವಿವಿಧ ಬಗೆ-ಯ ಹಾಡು ಕುಣಿತ ವೇಷಭೂಷಣ ಒಳಗೊಂಡ ಮನರಂಜನೆಯ ಕಾರ್ಯಕ್ರಮಗಳು ಆಗಮಿಸಿದ ಎಲ್ಲರನ್ನು ರಂಜಿಸಿತು. ಶಿಕ್ಷಕರಾದ ಲಕ್ಷ್ಮಣ ಹೊಸಮನಿ ಸ್ವಾಗತಿಸಿದರು, ಕಾರ್ಯಕ್ರಮವನ್ನು ಜೈನುಲ್ಲಾ ಬಾರಿಗಿಡದ ನಿರೂಪಿಸದರು, ಆರ್.ಸಿ. ತುರಮಂದಿ ವಂದಿಸಿದರು.

# ಗಾರ್ಬೇಜ್ ಯಾರ್ಡ್ ಸ್ಥಳಾಂತರಕ್ಕೆ ಆಗ್ರಹಿಸಿ ಪ್ರತಿಭಟನೆ



**ಹುಬ್ಬಳ್ಳಿ :** ಹುಬ್ಬಳ್ಳಿ ನಗರದ ಘನತ್ಯಾಜ್ಯವನ್ನು ಹೇಸಿಗೆಮಡ್ಡಿಗೆ ತಂದು ಸುರಿಯುತ್ತಿದ್ದು, ಇದರಿಂದ ಸ್ಥಳೀಯ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರಿಂದ ಕೂಡಲೇ ಇದನ್ನು ಸ್ಥಳಾಂತರ ಮಾಡಬೇಕೆಂದು ಒತ್ತಾಯಿಸಿ ಕಾರವಾರ ರಸ್ತೆಯಲ್ಲಿರುವ ಹೇಸಿಗೆಮಡ್ಡಿ (ಗಾರ್ಬೇಜ್ ಯಾರ್ಡ್) ಎದುರು ರಸ್ತೆ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು. ಹೇಸಿಗೆಮಡ್ಡಿ ತೆರವು ಹೋರಾಟ ಸಮಿತಿ ಅಧ್ಯಕ್ಷ ನಾಗರಾಜ್ ಗೌರಿ ನೇತೃತ್ವದಲ್ಲಿ ನಗರದ ಹೊರವಲಯದ ಕಾರವಾರ ರಸ್ತೆಯ ಗಾರ್ಬೇಜ್ ಯಾರ್ಡ್ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಹು–ಧಾ ಮಹಾನಗರ ಪಾಲಿಕೆ ವಿರುದ್ಧ ಆಕ್ರೋಶ ದಿಕ್ಕಾರ ಕೂಗಿ, ಕಸ ಸರ್ಕಾರಿ ವಾಹನಗಳನ್ನು ತಡೆದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿದಿನ ಕಸಕ್ಕೆ ಬೆಂಕಿ ಹಚ್ಚುವ ಕಾರ್ಯ ಮಾಡಲಾಗುತ್ತದೆ. ಇದರಿಂದ ಬೆಂಕಿಯಿಂದ ಹೊರಸೂಸುವಿಕೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು, ಅಸ್ತಮಾ, ದಮ್ಮು, ಚರ್ಮ ಸಮಸ್ಯೆ, ಉಸಿರಾಟದ ಸಮಸ್ಯೆ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳು ಸ್ಥಳೀಯರಿಗೆ ಎದುರಾಗುತ್ತಿವೆ.

ಜತೆಗೆನಾಯಿಗಳಉಪಟಳಹೆಚ್ಚಾಗಿದ್ದು,ಜತೆಗೆಸತ್ತಪ್ರಾಣಿಗಳ ಮಾಂಸವನ್ನು ಶ್ವಾನಗಳು ಮನೆಗಳತ್ತ ತಂದು ಹಾಕುತ್ತಿವೆ. ಇದರಿಂದ ದುರ್ವಾಸನೆಯಿಂದ ಊಟ, ಉಪಹಾರ ಮಾಡುವುದು ಹೇಗೆ ಎಂಬ ಪ್ರಶ್ನೆ ಮಾಡುತ್ತಿದೆ. ಹೀಗಾಗಿ ಕೂಡಲೇ ಹೇಸಿಗೆಮಡ್ಡಿಯನ್ನು ಹುಬ್ಬಳ್ಳಿ –ಧಾರವಾಡ ಮಹಾನಗರ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಕೂಡಲೇಸ್ಥಳಾಂತರಮಾಡುವನಿಟ್ಟಿನಲ್ಲಿಕ್ರಮಕೈಗೊಳ್ಳಬೇಕು, ಒಂದು ವೇಳೆ ನಿರ್ಲಕ್ಷ್ಯ ತೋರಿದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಪಾಲಿಕೆಗೆ ಎಚ್ಚರಿಕೆ ನೀಡಿದರು.

# ವಿವಿಧ ಕೌಶಲ್ಯ ತರಬೇತಿಗೆ ಅರ್ಜಿ

**ಬಾಗಲಕೋಟೆ :** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ನಿರುದ್ಯೋಗ ಯುವಕ, ಯುವತಿಯರಿಗೆ ಉಚಿತ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಟೈಲರ್ ಉದ್ಯೋಗ, ಅಂಗಡಿಯಲ್ಲಿ ಸಹಾಯಕ ಹೇರ್ ಥೆರಪಿಸ್ಟ್‌ನಲ್ಲಿ, ಹಾರ್ಡವೇರ್ ರಿಪೇರಿ, ಕೇಶ ವಿನ್ಯಾಸ, ಬ್ಯೂಟಿ ಥೆರಪಿಸ್ಟ್, ದೇಶಿಯ ಡೇಟಾ ಎಂಟ್ರಿ ಆಪರೇಟರ, ಸೌರ ಫಲಕ ಸ್ಥಾಪನೆ ಸೇವೆಯಲ್ಲಿ ಉಚಿತ ತರಬೇತಿ ನೀಡಲಾಗುತ್ತಿದೆ. ಆಸಕ್ತರು ಜಿಲ್ಲಾ ವ್ಯವಸ್ಥಾಪಕರ ಕಾರ್ಯಾಲಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕೊಠಡಿ ಸಂ.225, ಜಿಲ್ಲಾಡಳಿತ ಭವನ, ನವನಗರ–ಬಾಗಲಕೋಟೆ ಇವರಿಗೆ ಆಪ್‌ಲೈನ್ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ.08354–235016ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State